
ಅಚಲ

ಮೇ 1991 ಬೆಲೆ ರೂ. 1-50



ಭಾಗ್ಯ ಜಯಸುದರ್ಶನ

ಅಹಲ್ಯಾ ರಂಗ್ನೇಕರ್–ಸತ್ಯಾ

ಹೆಚ್. ಎಸ್. ಕಾತ್ಯಾಯಿನಿ

ಸಂಪುಟ 7 ಸಂಚಿಕೆ 2

"ಅಚಲ" ಪತ್ರಿಕೆಯನ್ನು ಪಡೆಯಬಯಸುವವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ಹತ್ತು ರೂಪಾಯಿಗಳನ್ನು ಎಂ.ಓ./ಡ್ರಾಫ್ಟ್ ಮೂಲಕ ಕಳುಹಿಸಿ ಕೂಪನ್‌ನಲ್ಲಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸ ಬದಲಾದರೆ ಕೂಡಲೇ ಕಾರ್ಡಿನಲ್ಲಿ ಬರೆದು ತಿಳಿಸಬೇಕು.

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
26, 1ನೇ ಮೇನ್, ವೈಯಾಳಿ ಕಾವಲ್
ಬೆಂಗಳೂರು–560 003

ಪುಸ್ತಕ ವಿಮರ್ಶೆಗಾಗಿ ಪುಸ್ತಕ ಕಳುಹಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ

ಸಂಪಾದಕ ಮಂಡಳಿ :
ಎನ್. ಗಾಯತ್ರಿ, ನೇಮಿಚಂದ್ರ
ಕಲೆ : ಚಂದ್ರನಾಥ್

ಚಂದಾ ವಿವರ :

ವಾರ್ಷಿಕ ಚಂದಾ	:	ರೂ. 10–00
ಬಿಡಿ ಪ್ರತಿ	:	ರೂ. 1–50
ವಿಶೇಷ ಪ್ರತಿ	:	ರೂ. 2–50
ಅಜೀವ ಚಂದಾ	:	ರೂ. 100–00

Printed at : PRINTSWELL., 78, 3rd Main Road Nagappa Block, Srirampuram, Bangalore-21 & Published by Dr. G. Ramakrishna on behalf of Jagruthi Mahila Adhyayana Kendra
26, I Main, Vyalikaval, Bangalore-560 003.
Editor : N. GAYATRI

ಅವಿವಾಹಿತೆ ತಾಯಾಗಬಾರದೆ ?

ಮದುವೆ ಇಲ್ಲದೆ ಅಥವಾ ಲೈಂಗಿಕ ಪ್ರಕ್ರಿಯೆ ಇಲ್ಲದೆ ಕೃತಕ ಗರ್ಭಧಾರಣೆ ಮೂಲಕ ಅವಿವಾಹಿತ ಮಹಿಳೆಯೊಬ್ಬಳು ತನ್ನ ಇಚ್ಛೆಯಂತೆ ಮಗುವನ್ನು ಪಡೆದುಕೊಳ್ಳುವುದು ತಪ್ಪೇ? ಮಗು ಬೇಕೆಂಬ ಅವಳ ಹಕ್ಕನ್ನು ಕಾನೂನು ನಿರ್ಬಂಧಿಸಬಹುದೆ ?

ಬ್ರಿಟನ್ನಿನಲ್ಲಿ ಇದೊಂದು ವಿವಾದವಾಗಿ ಪರಿಣಮಿಸಿದೆ, ಲೈಂಗಿಕ ಪ್ರಕ್ರಿಯೆ ಇಲ್ಲದ ಮಹಿಳೆ ಈಗ ಕೃತಕ ಗರ್ಭಧಾರಣೆಗೆ ಒಳಗಾಗಿದ್ದಾಳೆ. ಇನ್ನಿಬ್ಬರು ಬ್ರಿಟಿಷ್ ಗರ್ಭಾಧಾನ ಸಲಹಾ ಸಮಿತಿಯ ನೆರವಿಗಾಗಿ ಕಾಯುತ್ತಿದ್ದಾರೆ. ಇವು ಹಕ್ಕು-ಬಾಧ್ಯತೆ ಪ್ರಶ್ನೆಗಳನ್ನು ಎತ್ತಿದೆ.

ಖಾಸಗಿ ಹಾಗೂ ಧಾರ್ಮಿಕದತ್ತ ಗರ್ಭಾಧಾನ (ಫರ್ಟಿಲಿಟಿ)ಚಿಕಿತ್ಸಾಲಯ ಹಾಗೂ ರಾಷ್ಟ್ರೀಯ ಆರೋಗ್ಯ ಸೇವಾ ಗುಂಪಿಗೆ ಸೇರಿದ ಕೆಲವು ಆಸ್ಪತ್ರೆಗಳಲ್ಲಿ ಕೃತಕ ಗರ್ಭಧಾರಣೆ ಚಟುವಟಿಕೆ ನಡೆಯುತ್ತಿದೆ. ಈಗ ಬಂದಿರುವ ಸಂಕಷ್ಟವೆಂದರೆ. ಬರುವ ಸೆಪ್ಟಂಬರ್‌ನಿಂದ ಜಾರಿಗೆ ಬರಲಿರುವ ಕಾನೂನು ಎಲ್ಲರ ತಲೆಯನ್ನು ಬಿಸಿ ಮಾಡಿದೆ ಬ್ರಿಟನ್ನಿನ ಮಾನವ ಗರ್ಭಾಧಾನ ಮತ್ತು ಭ್ರೂಣ ಶಾಸ್ತ್ರ ಕಾಯ್ದೆಯಲ್ಲಿನ ಲೈಸೆನ್ಸ್ ಕಡ್ಡಾಯ ಅಂಶವು ಕೃತಕ ಗರ್ಭಧಾರಣೆಗೆ ನೆರವು ನೀಡುವ ಕ್ಲಿನಿಕ್‌ಗಳಿಗೆ ಅಡ್ಡಿಒಡ್ಡುತ್ತದೆ. ಈ ಚಿಕಿತ್ಸಾಲಯಗಳು ಹೊಸ ನೀತಿ ಸಂಹಿತೆ

ಪುಟ 21ರಲ್ಲಿ ಮುಂದುವರೆದಿದೆ

ಕಾನೂನು

"ಕಾನೂನು ಸಲಹೆ" "ಅಚಲ" ಆರಂಭಿಸಿರುವ ಹೊಸ ಅಂಕಣ, ಖ್ಯಾತ ವಕೀಲರೂ ಲೇಖಕಿಯೂ ಆಗಿರುವ ಡಾ. ಹೇಮಲತಾ ಮಹಿಷಿ ಅವರು ನಿಮ್ಮ ಸಮಸ್ಯೆಗಳಿಗೆ ಪರಿಹಾರ ಸೂಚಿಸುತ್ತಾರೆ. ನಿಮ್ಮ ಸಮಸ್ಯೆ ಬಿಂಬಿಸುವ ಪ್ರಶ್ನೆಗಳು "ಅಚಲ", ನಂ 26. 1 ಮೇನ್. ವೈಯಾಲಿ ಕಾವಲ್, ಬೆಂಗಳೂರು-560 003. ಇಲ್ಲಿಗೆ ತಲುಪಲಿ. ನಿಮ್ಮ ಹೆಸರು ವಿಳಾಸ ಸ್ಪಷ್ಟವಾಗಿರಲಿ. ನೀವು ಇಚ್ಛಿಸಿದರೆ ನಿಮ್ಮ ಹೆಸರನ್ನು ಗೋಪ್ಯವಾಗಿಡಲಾಗುವುದು.
ಈ ತಿಂಗಳ ಸಲಹೆಗೆ ಪುಟ 6 ನೋಡಿ.

"ಸೆಕ್ಯುಲರ್" ಭಾರತ ಎತ್ತ ಸಾಗಿದೆ ?

1991ರ ಲೋಕ ಸಭಾ ಚುನಾವಣೆಯುನ್ನು ಎದುರಿಸುತ್ತಿರುವ ಭಾರತದ ಜನತೆಯ ಮುಂದೆ ರಾಜಕೀಯ ಮತಾಂಧತೆ ಹಾಗೂ ಕೋಮುವಾದ ಇಂದು ದೊಡ್ಡ ಸವಾಲಾಗಿ ನಿಂತಿದೆ. ತಮ್ಮ ಸ್ವಾರ್ಥಕ್ಕಾಗಿ ಭಾರತ ದೇಶದ ಐಕ್ಯತೆಯುನ್ನು ಒಡೆಯಲು ಮತೀಯ ಕಲಹದ ಬೀಜ ಬಿತ್ತುವಲ್ಲಿ ಯಶಸ್ವಿಯಾದ ಆಂಗ್ಲ ಆಳ್ವಿಕೆಯ ಕುತಂತ್ರದ ವಿಷಯುವನ್ನು ಇಂದಿಗೂ ಹಿಂದೆಂದಿಗಿಂತ ಹೆಚ್ಚಾಗಿ ಅನುಭವಿಸುತ್ತಿರುವ ಭಾರತದ ಭವಿಷ್ಯ ಕರಳವಾಗಿದೆ ಸ್ವಾತಂತ್ರ್ಯ ಬಂದ ನಂತರ ಅಧಿಕಾರಕ್ಕೆ ಬಂದ ಸುಮಾರು ಎಲ್ಲಾ ಸರ್ಕಾರಗಳೂ ಒಂದಲ್ಲ ಒಂದು ರೀತಿಯಲ್ಲಿ ಜನರ ಕೋಮು ಭಾವನೆಗಳನ್ನು ತಮ್ಮ ಅಗತ್ಯಕ್ಕೆ ತಕ್ಕಂತೆ ಬಳಸಿಕೊಂಡವು. ಹೀಗಾಗಿ ಅಲ್ಪಸಂಖ್ಯಾತರು ವೋಟಿನ ಬ್ಯಾಂಕುಗಳಾದರು. ಮತಾಂಧತೆ ಮತ್ತು ಕೋಮುವಾದಗಳ ಬೆಳವಣಿಗೆಯ ರೂಪವಾಗಿ ಮತೀಯ ಘರ್ಷಣೆಗಳು ಹೆಚ್ಚುತ್ತಿದ್ದು ಅದರ ವಿಷ ಫಲಗಳನ್ನು ದೇಶದ ಎಲ್ಲ ಜನತೆ ಅನಿವಾರ್ಯವಾಗಿ ಅನುಭವಿಸಬೇಕಾಗಿದೆ.

ಸಂವಿಧಾನದಲ್ಲಿ ಭಾರತ ತನ್ನನ್ನು ಸೆಕ್ಯುಲರ್ ಎಂದು ಕರೆದುಕೊಂಡಿದೆ. ಭಾರತದಲ್ಲಿ ಇಂದು ಚಾಲ್ತಿಯಲ್ಲಿರುವ "ಸೆಕ್ಯುಲರ್" ಪದದ ವ್ಯಾಖ್ಯಾನವೂ ಕೂಡ ನಮ್ಮ ಸಂಸ್ಕೃತಿಗೇ ವಿಶಿಷ್ಟವಾದದ್ದು. ಯಾವುದೇ ನಿರ್ದಿಷ್ಟ ಧರ್ಮಕ್ಕೇ ಸೇರದೆ ಎಲ್ಲ ಧರ್ಮಗಳ ನಂಬಿಕೆ ಆಚರಣೆಗಳನ್ನು ಗೌರವಿಸುವ ರಾಷ್ಟ್ರ ನಮ್ಮದೆಂದು ವ್ಯಾಖ್ಯಾನಿಸಿಕೊಂಡರೂ ಆಚರಣೆಯಲ್ಲಿ ವ್ಯವಹಾರದಲ್ಲಿ ಪರಿಸ್ಥಿತಿ ಇದಕ್ಕೆ ತದ್ವಿರುದ್ಧವಾಗಿಯೇ ಇದೆ. ಮಗು ಹುಟ್ಟಿದಂದಿನಿಂದ, ಶಾಲೆಗೆ, ಕೆಲಸಕ್ಕೆ ಸೇರುವಾಗಲೆಲ್ಲಾ ಜಾತಿ, ಧರ್ಮಗಳ ಹಣೆ ಪಟ್ಟಿ ಕಟ್ಟಿಕೊಂಡು ಬದುಕುವ ಈ ರಾಷ್ಟ್ರದಲ್ಲಿ "ಸೆಕ್ಯುಲರ್" ಎನ್ನುವ ಈ ಪದಕ್ಕೆ ಧರ್ಮನಿರಪೇಕ್ಷತೆಯೆನ್ನುವ ಅರ್ಥವ್ಯಾಪ್ತಿ ಬರಲು ಸಾಧ್ಯವೇ ಇಲ್ಲ.

ಕೋಮು ಗಲಭೆಯ ಒಡಲಲ್ಲೇ ಸ್ವತಂತ್ರವಾದ ಭಾರತ ಅಂದಿನಿಂದ ಇಂದಿನವರೆಗೂ ಹಲವಾರು ಕೋಮು ಗಲಭೆಗಳನ್ನು ಕಂಡಿದೆ. ಆ ಕಾರಣಕ್ಕಾಗಿ ರಕ್ತದ ಕೋಡಿ ಹರಡಿದೆ. ಇಷ್ಟೆಲ್ಲಾ ಪರಿಸ್ಥಿತಿಯ ಜ್ಞಾನವಿದ್ದರೂ ಅಂದಿನಿಂದ ಇಂದಿನವರೆಗೆ ಕೋಮು ಸಂಘಟನೆಗಳ ಸಂಖ್ಯೆಯು ತೀವ್ರವಾಗಿ ಹೆಚ್ಚುತ್ತಾ ಸಾಗಿದೆ. ಜನತೆಯ ಅಜ್ಞಾನವನ್ನೇ ಬಂಡವಾಳ ಮಾಡಿಕೊಂಡಿರುವ ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ಮತ ಗಿಟ್ಟಿಸಿಕೊಳ್ಳಲು ಜನರ ಕೋಮು ಭಾವನೆಗಳನ್ನು ಕೆರಳಿಸುವಲ್ಲಿ ಉದ್ಯುಕ್ತರಾಗಿದ್ದಾರೆ. ಅಷ್ಟೇ ಅಲ್ಲ, ಎಲ್ಲ. ಬಂಡವಾಳಶಾಹಿ ಪಕ್ಷಗಳು ಕೋಮುವಾದ ಮತ್ತು ಮತಾಂಧತೆಗಳ ವಿಷವೃಕ್ಷಕ್ಕೆ ಎಂದಿಗಿಂತಲೂ ಹೆಚ್ಚು ನೀರೆರೆಯುತ್ತಿವೆ. ಚುನಾವಣೆಗಳಲ್ಲಿ ಅಭ್ಯರ್ಥಿಗಳ ಆಯ್ಕೆಯೇ ಮುಖ್ಯವಾಗಿ ಜಾತಿ ಮತ್ತು ಕೋಮುಗಳ ಆಧಾರದಲ್ಲಿ ನಡೆಯುತ್ತದೆಯಲ್ಲದೆ ಆಗ ದೇವರು ಮತ್ತು ಧರ್ಮ ಗುರುಗಳ ಆಶೀರ್ವಾದಕ್ಕೆ ಎಲ್ಲಿಲ್ಲದ ಬೇಡಿಕೆ ಬರುತ್ತದೆ. ಆ ಸಮಯದಲ್ಲಿ

ದೇವಸ್ಥಾನ, ಮಸೀದಿ, ಚರ್ಚುಗಳಿಗೆ ರಾಜಕೀಯ ಧುರೀಣರು ಭೇಟಿ ಕೊಡುವುದು ಸಾಮಾನ್ಯ ದೃಶ್ಯ. ಹೀಗೆ ಕೋಮು ಭಾವನೆಯನ್ನು ಸದಾ ಜಾಗೃತವಾಗಿಡುವ ಬಹಳಷ್ಟು ರಾಜಕೀಯ ಪಕ್ಷಗಳು ಅವುಗಳ ಲಾಭ ಪಡೆಯುವಲ್ಲಿ ಕಾತುರ ವಾಗಿರುತ್ತವೆ.

ಇಂದು ದೇಶದಲ್ಲಿ ಅಲ್ಪಸಂಖ್ಯಾತರಾದವರ ಮನವೊಲಿಸಿ, ಅವರನ್ನು ವೋಟಿನ ಬ್ಯಾಂಕು ಗಳಾಗಿ ಮಾಡಿಕೊಂಡಿರುವ ರಾಜಕೀಯ ಪಕ್ಷಗಳು ಹೇಗೆ ಜನ ವಿರೋಧಿ ನಿಲುವು ತಳೆಯಬಲ್ಲರು ಎಂಬುದಕ್ಕೆ "ಮುಸ್ಲಿಂ ಮಸೂದೆ" ಅತ್ಯುತ್ತಮ ಉದಾಹರಣೆ. ಶಾಬಾನೋ ಪ್ರಕರಣದಲ್ಲಿ ಸುಪ್ರೀಂ ಕೋರ್ಟು ನೀಡಿದ ಪ್ರಗತಿಪರ ತೀರ್ಪಿನ ವಿರುದ್ಧವಾಗಿಯೇ ಕಾರ್ಯ ಪ್ರವೃತ್ತವಾದ ಆಡಳಿತ ಸರ್ಕಾರ ಮುಸ್ಲಿಂ ಸಮುದಾಯದ ಒತ್ತಡಕ್ಕೆ ಮಣಿದದ್ದು ಚುನಾವಣೆಯಲ್ಲಿ ಲಾಭ ಪಡೆಯುವ ಉದ್ದೇಶದಿಂದ ಮಾತ್ರ, ಎನ್ನುವುದು ಎಲ್ಲರಿಗೂ ಸರ್ವವೇದ್ಯವಾದ ವಿಚಾರ. ಇಂದು ರಾಮ ಜನ್ಮ ಭೂಮಿಯ ಹೆಸರು ಹೇಳಿ ಮತ ಪಡೆಯಲು ಹೊರಟಿರುವ "ಭಾರತೀಯ ಸಂಸ್ಕೃತಿಯ ರಕ್ಷಕ"ರೆಂದುಕೊಳ್ಳುವ ಮಂದಿ ಜನತೆಗೆ ನೀಡುತ್ತಿರುವ ಆಶ್ವಾಸನೆಯಾದರೂ ಎಂತಹುದು? ನಾಲ್ಕು ವರ್ಷಗಳ ಹಿಂದೆ ದೇವಾಲಯದಲ್ಲಿ ನಡೆದ "ಸತಿ"ಯನ್ನು ಸಮರ್ಥಿಸಿದ, ಬೆಂಬಲಿಸಿದ ಜನ ಬಂದು ಜನತೆಯ ಧಾರ್ಮಿಕ ಹಕ್ಕನ್ನು ಕಾಯುವ ನೆಪದಲ್ಲಿ ಮಾನವೀಯತೆಯ ನಾಶಕ್ಕೆ ಕೈ ಹಾಕಿದ್ದಾರೆ.

"ಸೆಕ್ಯುಲರ್" ಎಂದು ಹೇಳಿಕೊಳ್ಳುವ ಭಾರತ ದೇಶದಲ್ಲಿ ವಿವಿಧ ಮತೀಯ ಕಾನೂನುಗಳು ಜಾರಿಯಲ್ಲಿದ್ದು "ಭಾರತೀಯ ಮಹಿಳೆ" ಎಂಬ ಭಾವೈಕ್ಯದ ಕಲ್ಪನೆಯನ್ನು ಊಹಿಸಲಾಗದ ಸ್ಥಿತಿಗೆ ನಮ್ಮ ಸಾಮಾಜಿಕ ಪರಿಸ್ಥಿತಿಯನ್ನು ತಳ್ಳಿದೆ. ಆದ್ದರಿಂದ ಇಂದು ಭಾರತೀಯ ಮಹಿಳೆಯ ಮುಂದಿ ರುವ ಮುಖ್ಯ ಸವಾಲು ಎರಡು : ಏಕರೂಪ ಸಿವಿಲ್ ಸಂಹಿತೆಗಾಗಿ ಹೋರಾಡುವುದು. ಮತ್ತೊಂದು ಎಲ್ಲ ಧರ್ಮ, ಜಾತೀಯ ಆಚರಣೆಗಳನ್ನು ಕುಟುಂಬದ ಹೊಸ್ತಿಲೊಳಕ್ಕೆ ಮಾತ್ರ ಉಳಿಸಿಕೊಂಡು ಸಾರ್ವಜನಿಕವಾಗಿ ಜಾತ್ಯಾತೀತರಾಗಿ, ಧರ್ಮರಾಹಿತ್ಯಗುಣದೊಂದಿಗೆ ವರ್ತಿಸುವುದು. ಕೋಮು ಭಾವನೆಗಳನ್ನು ಚಿಗುರಿರುವಾಗಲೇ ಚಿವುಟಿ ಹಾಕುವುದಷ್ಟೇ ಅಲ್ಲದೆ, ಜನರಲ್ಲಿ ಕೋಮು ಭಾವನೆ ಗಳನ್ನು ಬಿತ್ತಿ ಸ್ವಹಿತ ಸಾಧಿಸಿಕೊಳ್ಳುವ ರಾಜಕಾರಣಿಗಳ ಕಪಟ ತಂತ್ರವನ್ನು ಅರ್ಥ ಮಾಡಿಕೊಂಡು ದೇಶವನ್ನು ಧರ್ಮನಿರಪೇಕ್ಷೆಯತ್ತ ಕೊಂಡೊಯ್ಯುವ ಪ್ರಗತಿಪರ ವ್ಯಕ್ತಿಗಳಿಗೆ, ಪಕ್ಷಗಳಿಗೆ ಅಧಿಕಾರದ ಸೂತ್ರ ಕೊಡುವುದು.

ಕಾವ್ಯ

ಒಂದು ವರ್ಣನೆ

ನಾಯಕನೆಂದರೆ ಹೇಗಿರಬೇಕೆಂಬುದು
ನಮಗೆಲ್ಲರಿಗೂ ಗೊತ್ತು
ಧೀರೋದಾತ್ತ ನಿಲುವು
ಉದಾರ ಮನಸ್ಸು, ಪ್ರಫುಲ್ಲಿತ ವದನ
ಸ್ನೇಹಚಿತ್ತ. ಅಭಯ ಹಸ್ತ
ಉದಾಹರಣೆಗೆ ರಾಮ ಭೀಮರು
ಇನ್ನೂ ಹಲವರು,

ನಮ್ಮ ಮಹಾ ಮಹಾ ಕಾವ್ಯಗಳಲ್ಲಿ
ಪುರಾಣಗಳಲ್ಲಿ ಇತಿಹಾಸಗಳಲ್ಲಿ
ಶಾಸನಗಳಲ್ಲಿ ಮನೆ ಮನೆಗಳಲ್ಲಿ
ಅವರಿವರ ಬಾಯಿಯಲ್ಲಿ
ನಮ್ಮ ನಿಮ್ಮ ಅಕ್ಕ ಪಕ್ಕದಲ್ಲಿ
ಕಂಡಿದ್ದೇವೆ ಕಾಣುತ್ತಿದ್ದೇವೆ
ಮುಟ್ಟಿದ್ದೇವೆ ಮಾತನಾಡಿಸಿದ್ದೇವೆ
ಎಲ್ಲಕ್ಕಿಂತಲೂ ಹೆಚ್ಚಾಗಿ ಹೆತ್ತಿದ್ದೇವೆ,

ಇನ್ನು ನಾಯಕಿ ಎಂದರೆ
ಹೇಗಿರಬೇಕು ಹೇಳುವಿರಾ
ಸೀತೆಗಿಂತ ಬೇರೆ ಬೇಕೆ
ಆಹಾ! ಎಂತಹ ಸತೀ ಸಾಧ್ವಿ?
ಅಷ್ಟಿದ್ದರೆ ಸಾಕು
ನಮ್ಮ ಪುರುಷರೆಲ್ಲರಿಗೆ
ಭಾರತವೇ ಬೇಕು
ಜನುಮ ಜನುಮಕೂ

ನಮ್ಮ ಶಕುಂತಲೆ ಏನು ಕಡಿಮೆ
ತಪವಾಗಿಸಲಿಲ್ಲವೆ ತನ್ನನ್ನು?
ದುಶ್ಯಂತನ ಮರೆವಿಗೆ
ಉಂಗುರವೇ ತನ್ನ ಕೈ ಬಿಡಲಿ
ದುಶ್ಯಂತನೇ ತೊರೆಯಲಿ
ಪತಿಭಕ್ತಿಯೊಂದನೇ ಹಿಡಿದು
ಸಾಗಿದವಳು ಮುಕ್ತಿ ಪಥಕೆ.

ಇನ್ನು ದ್ರೌಪದಿ?
ಐದು ಜನ ಪತಿಯರನ್ನು
ಪಡೆದು ಅಭದ್ರೆ ಇರಲಿ
ಪಣಕೊಡ್ಡಿ ಸೋತರೂನು
ಅವರ ನೆರಳಿನ ನೆರಳು,

ಅಹಲ್ಯೇ!
ಪಾಪ ಮುಗ್ಧೆ
ಏನೂ ಅರಿಯದ ದಗ್ಧೆ
ಶಾಪ ವಿಮೋಚನೆಗೆ ತಪಿಸಿದ ಅಬಲೆ
ಇನ್ನು ಹೇಳಬೇಕೆಂದರೆ ನಮ್ಮ ನಿಮ್ಮ ತಾಯಂದಿರು
ಹೌದು ಇವರು ನಮ್ಮ ನಾಯಕಿಯರು
ಬೇರೆ ವರ್ಣನೆ ಬೇಕೆ?
ಅಥವಾ ಇಷ್ಟೇ ಸಾಕೇ?

O ಭಾಗ್ಯ ಜಯಸುದರ್ಶನ

ಕಾನೂನು ಮತ್ತು ಸಲಹೆ

ಪ್ರಶ್ನೆ 1. ನಾನೊಬ್ಬ ವಿಚ್ಛೇದಿತ ಸ್ತ್ರೀ, ನಿರುದ್ಯೋಗಿ ಕೂಡ, ವಿಚ್ಛೇದನ ಹೊಂದಿ ಮೂರು ವರ್ಷಗಳಾಗಿವೆ ನನ್ನ ಪತಿ ಬ್ಯಾಂಕಿನ ಅಧಿಕಾರಿಯಾಗಿದ್ದರು, ನನಗೆ ಮತ್ತು ನನ್ನ ಮಗುವಿಗೆ ಜೀವನ ನಿರ್ವಹಣೆಗೆಂದು ಒಂದು ಸಾವಿರ ರೂಗಳ ಋಣವನ್ನು ಪಡೆಯುತ್ತಿರುವೆ. ಈಗ ಮೂರು ತಿಂಗಳ ಹಿಂದೆ ನಾನು ಮರು ಮದುವೆಯಾಗಿದ್ದೇನೆ. ನನ್ನ ಈಗಿನ ಪತಿ ಅಂತಹ ಒಳ್ಳೆಯ ಕೆಲಸದಲ್ಲಿಲ್ಲ. ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದಾರೆ. ನಾನು ಈಗ ವಿವಾಹಿತೆಯಾಗಿರುವುದರಿಂದ ನನ್ನ ಹಿಂದಿನ ಪತಿಯಿಂದ ಪಡೆಯುತ್ತಿರುವ ನಿರ್ವಹಣಾ ಭತ್ಯೆಯನ್ನು ಪಡೆಯಬಹುದೇ.?

ಉತ್ತರ : ವಿಚ್ಛೇದನ ಪಡೆದ ನಂತರ ಮರು ಮದುವೆಯಾದರೆ ಮಹಿಳೆಗೆ ಕಾನೂನಿನ ಪ್ರಕಾರ ಮೊದಲ ಪತಿಯಿಂದ ಜೀವನಾಂಶ ಪಡೆಯುವ ಹಕ್ಕು ಇರುವುದಿಲ್ಲ. ಆ ಮಗುವಿಗೆ ಆ ಹಕ್ಕು ಇರುತ್ತದೆ. ಮೊದಲ ಪತಿಯು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ತನ್ನ ವಿಚ್ಛೇದಿತ ಪತ್ನಿಗೆ ನೀಡಿರುವ ಜೀವನಾಂಶವನ್ನು ರದ್ದುಪಡಿಸಿ ಕೊಳ್ಳಬಹುದು, ಈಗ ನಿಮ್ಮ ಜೀವನ ನಿರ್ವಹಣೆಯ ಜವಾಬ್ದಾರಿ ನಿಮ್ಮ ಎರಡನೆಯ ಪತಿಯದು.

ಪ್ರಶ್ನೆ 2. ನಾನು ಹುಟ್ಟಿನಿಂದ ಪರಿಶಿಷ್ಟ ಜಾತಿಗೆ ಸೇರಿದವಳು. ವಿವಾಹವಾದದ್ದು ಕ್ರಿಶ್ಚಿಯನ್ ಮತಕ್ಕೆ ಸೇರಿದವನನ್ನು. ನಮ್ಮದು ಪ್ರೇಮ ವಿವಾಹ, ನನಗೆ 16 ವರ್ಷದ ಮಗಳು ಮತ್ತು 14 ವರ್ಷದ ಮಗ ಇದ್ದಾರೆ. ಮೂರು ವರ್ಷಗಳಿಂದ ಹಲವಾರು ಕಾರಣಗಳಿಂದ ನನ್ನ ಮತ್ತು ಪತಿಯ ಸಂಬಂಧ ಹಳಸಿ ನಾವು ಬೇರೆ ವಾಸಿಸುತ್ತಿದ್ದೇವೆ. ಅಧಿಕೃತವಾಗಿ ವಿಚ್ಛೇದನ ಪಡೆದಿಲ್ಲ. ಈಗ ಮುಖ್ಯ ಪ್ರಶ್ನೆ ನನ್ನ ಮಕ್ಕಳಿಗೆ ನನ್ನ ಜಾತಿಯ ಕಾರಣದಿಂದ ಸಿಗಬಹುದಾದ ರಿಯಾಯಿತಿ ಸಿಗುತ್ತದೆಯೇ?

ಉತ್ತರ : ತಂದೆ-ತಾಯಿ ಬೇರೆ ಬೇರೆ ಧರ್ಮಕ್ಕೆ ಸೇರಿರುವಾಗ ಮಕ್ಕಳನ್ನು ಯಾವ ಧರ್ಮಕ್ಕೆ ಅನುಸಾರವಾಗಿ ಬೆಳೆಸುತ್ತಾರೆಯೋ ಅವರು ಆ ಧರ್ಮಕ್ಕೆ ಸೇರಿದವರಾಗುತ್ತಾರೆ.

☐ ಹೇಮಲತಾ ಮಹಿಷಿ

ಅಂಬೇಡ್ಕರ್ ಮತ್ತು ಮಹಿಳೆ

ಭಾರತ ಸಂವಿಧಾನದ ಶಿಲ್ಪಿ, ಸಮರ್ಥ ನ್ಯಾಯವಾದಿ, ಅಸ್ಪೃಶ್ಯರು ಮತ್ತು ಮಹಿಳೆಯರ ಹಕ್ಕಿಗಾಗಿ ಹೋರಾಟ ನಡೆಸಿದ ಸಾಮಾಜಿಕ ಚಳವಳಿಯ ನೇತಾರ ಡಾ. ಬಿ.ಆರ್. ಅಂಬೇಡ್ಕರ್ ಅವರ ಜನ್ಮ ಶತಮಾನೋತ್ಸವ ನಡೆಯುತ್ತಿದೆ.

ಅಹಲ್ಯಾ ರಂಗ್ನೇಕರ್

ಅನು : ಸತ್ಯಾ

ಈ ಸಂದರ್ಭದಲ್ಲಿ ಒಂದು ಸಾಮಾಜಿಕ ಚಳವಳಿಗೆ ನೂರು ವರ್ಷ ಮಹತ್ತರವಾದುದೇನಲ್ಲ, ಆದರೆ, ನಮ್ಮ ನಾಡಿಗೆ ಈ ಹೆಮ್ಮೆಯ ಪುತ್ರನನ್ನು ನೀಡಿದ, "ಅಸ್ಪೃಶ್ಯ" ವರ್ಗ ಈ ಅವಧಿಯಲ್ಲಿ ಅನುಭವಿಸಿದ ಕಷ್ಟ-ಕೋಟಲೆಗಳು ವರ್ಣಿಸಲು ಸಾಧ್ಯವಾಗದಷ್ಟು.

ಈ ಶತಮಾನದ ಮೊದಲ ಮೂರು ದಶಕಗಳಲ್ಲಿ ಬದಲಾವಣೆಯ ಬೀಜ ಬಿತ್ತಿದ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ, "ನೀರು ತುಂಬಿದ ಕಣ್ಣುಗಳು ಬಣ್ಣಿಸುವ" ಅನುಭವಗಳನ್ನು ಉದಾಹರಿಸುವುದಾದರೆ "ಓರ್ವ ಹಿಂದೂ ಯಾರನ್ನು ಅಸ್ಪೃಶ್ಯನೆಂದು ಕಂಡನೋ ಅವನನ್ನು ಓರ್ವ ಪಾರ್ಸಿಯೂ ಅಸ್ಪೃಶ್ಯನಂತೆ ಕಂಡು; ಮುಸ್ಲಿಮನೂ ಅಸ್ಪೃಶ್ಯನಂತೆ ಕಂಡ. ಸದಾ ಕಾಲ ಹಳ್ಳಿಗಳ ಹೊರವಲಯದಲ್ಲಿ ಬದುಕಿದ ಈ ಅಸ್ಪೃಶ್ಯರು. ಇಡೀ ಹಳ್ಳಿ ತಮ್ಮದೆಂಬಂತೆ ಅದನ್ನು ಶುಚಿಗೊಳಿಸಿದರು. ಆದರೆ ಅದರೊಳಗೆ ಬದುಕುವಂತಿರಲಿಲ್ಲ; ಹಳ್ಳಿಯ ಜನರನ್ನು ಮುಟ್ಟುವಂತೆಯೂ ಇಲಿಲ್ಲ."

ಸ್ವಾತಂತ್ರ್ಯ ನಂತರದ 43 ವರ್ಷಗಳಲ್ಲಿ ಈ ಶಾಪದ ರೂಪ ಬದಲಾಗಿದೆಯೇ ಹೊರತು, ಸಂಪೂರ್ಣ ನಾಶವಾಗಿಲ್ಲ. ಪವಿತ್ರ-ಅಪವಿತ್ರ; ಅಸ್ಪೃಶ್ಯ ಮುಂತಾದ ಅವೈಜ್ಞಾನಿಕ ನಂಬಿಕೆಗಳು ಮತ್ತು ಅಪಚಾರಗಳ ತಳಹದಿಯ ಮೇಲಿರುವ ಹಿಂದೂ ಸಮಾಜ ಅಸ್ಪೃಶ್ಯರು ದೇವಾಲಯ ಪ್ರವೇಶಿಸುವುದನ್ನು ನಿಷೇಧಿಸಿದೆ; ಹಳ್ಳಿಯ ಬಾವಿಯಿಂದ ನೀರು ಕುಡಿಯುವುದನ್ನು ನಿಷೇಧಿಸಿದೆ; ಶಿಕ್ಷಣದ ಹಕ್ಕನ್ನೂ ಕಸಿದುಕೊಂಡಿದೆ. ಇದೆಲ್ಲವೂ ಕೆಲವೇ ಮಂದಿ ಸವರ್ಣೀಯರ ಮುಷ್ಟಿಯಲ್ಲಿದೆ, ಪವಿತ್ರ ಗ್ರಂಥಗಳ ಬೆಂಬಲದೊಂದಿಗೆ ಬೆಳೆದು ಬಂದಿದ್ದ ಈ ಚತುರ್ವರ್ಣ ಮತ್ತು ಜಾತಿ ಪದ್ಧತಿಗಳ ವಿರುದ್ಧ ಏಕಾಂಗಿ ವೀರನಾಗಿ ಹೋರಾಡಿದ ಅಂಬೇಡ್ಕರ್ ಈ ಉಳಿಗಮಾನ್ಯ ಪದ್ಧತಿಗೆ ಭಾರೀ ಪೆಟ್ಟು ನೀಡಿದರು,

ಇದೇ ಮೂಢ ನಂಬಿಕೆಗಳು ಭಾರತೀಯ ನಾರಿಯ ದುರಂತಮಯ ಬದುಕಿಗೂ ಕಾರಣವಾಗಿದ್ದವು. ಡಾ. ಅಂಬೇಡ್ಕರ್ ಅವರು ಅಸ್ಪೃಶ್ಯರ ಸಾಮಾಜಿಕ ವಿಮೋಚನೆಗಾಗಿ ಮನುಸ್ಮೃತಿಯ ವಿರುದ್ಧ ಮಾಡಿದ ಹೋರಾಟವು ಕೋಟ್ಯಂತರ ಹಿಂದೂ ಮಹಿಳೆಯರ ಪಾಲಿಗೆ ಹೊಸ ಜಗತ್ತಿನ ಬಾಗಿಲು ತೆರೆಯಿತು. ಉಚ್ಚ ಜಾತಿಗಳಲ್ಲಿ ಧರ್ಮವು ಮಹಿಳೆಯ ಶೋಷಣೆಗೆ ಅಧಿಕೃತ ಸಮ್ಮತಿ ನೀಡಿತ್ತು; ಸ್ತ್ರೀಯು ಪುರುಷನ ಗುಲಾಮಳಾಗಿದ್ದಳು. ಆಕೆಯ ಸಾಮಾಜಿಕ ವಿಮೋಚನೆಗೆ, ಆರ್ಥಿಕ ಮತ್ತು ಸಾಂಸ್ಕೃತಿಕ ಸ್ವಾತಂತ್ರ್ಯದ ಸಂಪಾದನೆಗೆ ಆಕೆಯ ಮೇಲೆ ಇನ್ನಿಲ್ಲದಷ್ಟು ನಿಯಂತ್ರಣಗಳನ್ನು ಹೇರಿದ್ದ "ಕ್ರೂರ ಪ್ರಣಾಳಿಕೆ"-ಮನುಸ್ಮೃತಿಯ ವಿರುದ್ಧ ಭಾರೀ ಹೋರಾಟ ನಡೆಸಬೇಕಿತ್ತು. ಅಂಬೇಡ್ಕರ್ ಈ ಕೆಲಸಕ್ಕಾಗಿ ಸಾಕಷ್ಟು ಶ್ರಮ ವಹಿಸಿದರು. "ಮನು ಮಹಿಳೆಯರಿಗೆ.... ಅಶುದ್ಧ ಆಸೆಗಳನ್ನು, ಕೆಟ್ಟ ನಡವಳಿಕೆಯನ್ನು ಹಾಗೂ ಅವಿಧೇಯತೆ ಗುಣಗಳನ್ನು ದಯಪಾಲಿಸಿದ. ಯಾವುದೇ ಸಂದರ್ಭದಲ್ಲಿ ಆಕೆಗೆ ಸ್ವಾತಂತ್ರ್ಯ ದೊರೆಯದಂತೆ ಎಚ್ಚರ ವಹಿಸಿದ. ಹಗಲೂ-ರಾತ್ರಿ ಆಕೆ ಪರಾವಲಂಬಿಯಾಗಿರುವಂತೆ ನೋಡಿಕೊಂಡ. ಸದಾ ಯಾರಾದರೊಬ್ಬರ ನಿಯಂತ್ರಣ ಹೇರಿದ" ಎಂದು ಅಂಬೇಡ್ಕರ್ ಮನುಸ್ಮೃತಿಯನ್ನು ಟೀಕಿಸಿದ್ದಾರೆ.

ಮನು ಮಹಿಳೆಯರ ಮೇಲೆ ಹೇರಿರುವ ನಿಯಮಾವಳಿಗಳನ್ನು "ರಾಕ್ಷಸೀಯ ಪ್ರವೃತ್ತಿ" ಎಂದು ಖಂಡಿಸಿರುವ ಅಂಬೇಡ್ಕರ್ ಅವರು, "ಪುರುಷ ತನ್ನ ಪತ್ನಿಯನ್ನು ಬಿಟ್ಟು

ಬಿಡುವುದನ್ನು ಮನು ತಡೆಯಲಿಲ್ಲ, ಆಕೆಯನ್ನು ಮಾರಾಟ ಮಾಡಲು ಅವನಿಗೆ ಅಧಿಕಾರ ನೀಡಿದ. ಹೆಣ್ಣು ಸ್ವಾತಂತ್ರ್ಯ ಹೀನಳಾಗಿರಲು ಬೇಕಾದುದೆಲ್ಲವನ್ನೂ ಮಾಡಿದ, ಇದು ರಾಕ್ಷಸೀ ಪ್ರವೃತ್ತಿ ಅಲ್ಲವೆಂದಾದರೆ, ಮತ್ತಾವುದೂ ರಾಕ್ಷಸೀ ಪ್ರವೃತ್ತಿಯಾಗುವುದಿಲ್ಲ" ಎಂದೂ ಹೇಳಿದ್ದಾರೆ.

"ಮನು, ಮಹಿಳೆಯರಿಗಾಗಿ ಬೋಧಿಸಿದ ಜೀತ ಪದ್ಧತಿಯು ಉಳಿಗಮಾನ್ಯ ಪದ್ಧತಿಯ ಅಂಗವಾದ ವರ್ಣ ಭೇದ ಮತ್ತು ಜಾತಿ ಪದ್ಧತಿಗಳನ್ನು ರಕ್ಷಿಸುವ ಉದ್ದೇಶ ಹೊಂದಿತ್ತು" ಎಂಬುದನ್ನು ಅಂಬೇಡ್ಕರ್ ಸ್ಪಷ್ಟವಾಗಿ ತೋರಿಸಿದ್ದಾರೆ. ಅಂತರ ಜಾತೀಯ ವಿವಾಹಗಳನ್ನು ಮತ್ತು ಅಂತರ ಧರ್ಮೀಯ ವಿವಾಹಗಳನ್ನು ತಿರಸ್ಕರಿಸಿದ ಉಳಿಗಮಾನ್ಯ ಪದ್ಧತಿಗೆ, ಸ್ತ್ರೀಗೆ ವಿವಾಹದ ಹಕ್ಕು ಅಥವಾ ವಿಚ್ಛೇದನದ ಸ್ವಾತಂತ್ರ್ಯ ನೀಡುವುದು ತನ್ನ ಬೇರುಗಳನ್ನೇ ಅಲುಗಿಸಿದಂತಾಗಿತ್ತು. ಆದ್ದರಿಂದಲೇ ಪುರಾಣ ಗ್ರಂಥಗಳು ವಿವಾಹ ಬಂಧನದ ಸಂರಕ್ಷಣೆಗೆ ಅತಿ ಕಠಿಣ ನಿಯಮಗಳನ್ನು ವಿಧಿಸಿದ್ದವು. ನೋಟಮಾತ್ರಕ್ಕೆ ಈ ನಿಯಮಗಳು ಸ್ತ್ರೀ-ಪುರುಷರಿಗೆ ಒಂದೇ ಎಂಬಂತೆ ಕಂಡು ಬಂದರೂ, ವಾಸ್ತವದಲ್ಲಿ ನಲುಗಿದ್ದು ಮಹಿಳೆಯರು. ಆದರಲ್ಲೂ ಉಚ್ಚ ಜಾತಿಯ ಮಹಿಳೆಯರದು ತ್ರಿಶಂಕು ಸ್ಥಿತಿಯಾಗಿತ್ತು, ಬಾಲ್ಯ ವಿವಾಹ, ವಿಧವಾ ಮರು ವಿವಾಹದ ನಿಷೇಧ, ವಿಧವೆಯರ ತಲೆ ಬೋಳಿಸುವುದು, ಸತಿಪದ್ಧತಿ ಮೊದಲಾದವು ಉಚ್ಚ ಜಾತಿಯ ಮಹಿಳೆಯರ ಜೀವನವನ್ನು ನರಕಸದೃಶಗೊಳಿಸಿದ್ದವು.

ಈ ಪದ್ಧತಿಗಳ ನಿರ್ಮೂಲನೆಗೆ, ಜಾತಿ ಪದ್ಧತಿಯ ನಾಶಕ್ಕೆ ಕರೆ ನೀಡಿದ ಅಂಬೇಡ್ಕರ್ "ಎರಾಡಿಕೇಷನ್ ಆಫ್ ಕ್ಯಾಸ್ಟ್ ಡಿಫರೆನ್ಸಸ್" ಎಂಬ ತಮ್ಮ ಪುಸ್ತಕದಲ್ಲಿ, ಈ ಸಮಸ್ಯೆಗಳಿಗೆ ಪರಿಹಾರ "ಮಿಶ್ರ ರಕ್ತ ಸಂಬಂಧವೊಂದೇ" ಎಂದು ಪ್ರತಿಪಾದಿಸಿದ್ದಾರೆ. ಸುಮಾರು 53 ಒಳಪಂಗಡಗಳನ್ನು ಒಳಗೊಂಡ ಮಹರ್ ಸಮುದಾಯವು ಬೌದ್ಧ ಧರ್ಮವನ್ನು ಒಪ್ಪಿಕೊಂಡ ಕೂಡಲೇ ಇಂತಹ ಮಿಶ್ರ ರಕ್ತ ಸಂಬಂಧಕ್ಕೆ ದಾರಿ ಮಾಡಿಕೊಟ್ಟಿತು.

ಅಂಬೇಡ್ಕರ್ ಅವರ ಸಾಧನೆಗಳಲ್ಲಿ ಕಿರೀಟಪ್ರಾಯವಾಗಿರುವುದು "ಹಿಂದೂ ಕೋಡ್ ಬಿಲ್". ಈ ಮಸೂದೆಯು ಹಿಂದೂ ಸ್ತ್ರೀ-ಪುರುಷರಿಗೆ ಅಂತರ ಜಾತಿಯ ವಿವಾಹಗಳಿಗೆ ಸಮ್ಮತಿ ನೀಡಿದುದಲ್ಲದೆ, ಮಹಿಳೆಗೆ ವಿಚ್ಛೇದನ ಪಡೆಯುವ ಹಕ್ಕನ್ನು ನೀಡಿದ್ದು ಈ ಮಸೂದೆಯ ಹಿರಿಮೆ. ಮನುಸ್ಮೃತಿಯು ಮಹಿಳೆಯರ ಮೇಲೆ ಹೇರಿದ್ದ ನಿಯಂತ್ರಣಗಳ ಘೋರ ಸ್ವರೂಪಗಳನ್ನು ಸಮರ್ಥವಾಗಿ ಚಿತ್ರಿಸಿದ ಅಂಬೇಡ್ಕರ್ ಅವರ ಸಾಮರ್ಥ್ಯದಿಂದಾಗಿ ಹಿಂದೂ ಮಹಿಳೆಗೆ ವಿಚ್ಛೇದನದ ಹಕ್ಕು ನೀಡಬೇಕೆಂಬುದಕ್ಕೆ ಜನಮನ್ನಣೆ ದೊರೆಯಿತು.

ಜಾತಿ ಪದ್ಧತಿಯೊಂದಿಗೆ ಒಂದಾಗಿ ಬೆಸೆದುಕೊಂಡಿರುವ ಭಾರತದ ಜಮೀನ್ದಾರಿ ಪದ್ಧತಿಯ ಆಸ್ತಿಯ ಹಕ್ಕನ್ನು ಸಂಪೂರ್ಣವಾಗಿ ಪುರುಷನಿಗೇ ವಹಿಸಿತ್ತು; ಭೂಮಿಯ ಒಡೆತನ, ಕುಟುಂಬದ ಆದಾಯದ ಪಾಲು, ಕೃಷಿ ಉತ್ಪನ್ನದ ವಿತರಣೆ ಎಲ್ಲವೂ ಮಹಿಳೆಯರನ್ನು ಪ್ರತ್ಯೇಕಿಸುವತ್ತಲೇ ಗುರಿ ಹೊಂದಿದ್ದವು. ಬೆವರು ಸುರಿಸಿ ದುಡಿಯುತ್ತಿದ್ದ ಶ್ರಮಿಕ ವರ್ಗವಾಗಲಿ, ಹಿಂದೂ ಮಹಿಳೆಯಾಗಲಿ ಈ ಆಸ್ತಿಯಲ್ಲಿ ಚಿಕ್ಕಾಸು ಪಾಲನ್ನು ಕೇಳುವಂತಿರಲಿಲ್ಲ. "ಮನು ಆಸ್ತಿಯ ವಿಚಾರದಲ್ಲಿ ಹೆಂಡತಿಯನ್ನು ಗುಲಾಮಳ ಸ್ಥಾನಕ್ಕೆ ಇಳಿಸಿದ್ದ" ಎನ್ನುತ್ತಾರೆ ಅಂಬೇಡ್ಕರ್.

1950ರಲ್ಲಿ ಸಿದ್ಧಾರ್ಥ ಕಾಲೇಜಿನಲ್ಲಿ ಮಾತನಾಡುತ್ತಿದ್ದ ಡಾ. ಅಂಬೇಡ್ಕರ್ ಅವರು, "ಹಿಂದೂ ಕಾಯಿದೆಯ ಕೊನೆಯ ಬದಲಾವಣೆ ಮಹಿಳೆಯರ ಆಸ್ತಿಯ ಹಕ್ಕಿಗೆ ಸಂಬಂಧಿಸಿದ್ದು. 1937ಕ್ಕೆ ಮುನ್ನ ಆಕೆ ಒಂದು ಕುಟುಂಬದ ಸೊಸೆಯಾಗಿಯಾಗಲಿ ಅಥವಾ ವಿಧವೆ ಸೊಸೆಯಾಗಿಯಾಗಲಿ ಆ ಕುಟುಂಬದಲ್ಲಿ ಆಸ್ತಿಯ ಪಾಲನ್ನು ಕೇಳು

ವಂತಿರಲಿಲ್ಲ ಆದರೆ 1937ರ ಕಾಯಿದೆಯು ವಿಧವೆಗೆ ತನ್ನ ಮೃತ ಪತಿಯ ಆಸ್ತಿಯನ್ನು ಪಡೆಯುವ ಹಕ್ಕು ನೀಡಿತು. ಮಹಿಳೆಯ ಆಸ್ತಿಯ ಹಕ್ಕು ಅಪೂರ್ಣವಾಗಿತ್ತು. ಈಗ ಹಿಂದೂ ಕಾಯಿದೆಯ ಮೂಲಕ ಮನೆಯ ಮಗಳಿಗೂ ಮಗನಿಗೂ ಆಸ್ತಿಯ ಮೇಲೆ ಹಕ್ಕಿದೆ ಎಂದು ಘೋಷಿಸಲಾಗಿದೆ" ಎಂದರು,

ಹಿಂದೂ ಮಸೂದೆಯನ್ನು ಜಾರಿಗೆ ತರುವಲ್ಲಿ ಡಾ. ಅಂಬೇಡ್ಕರ್ ಎಲ್ಲರ ಮನ ಒಲಿಸಲು ಸಾಕಷ್ಟು ಶ್ರಮಪಡಬೇಕಾಯಿತು. ಹಿಂದೂ ಸನಾತನವಾದಿಗಳ ವಿರುದ್ಧ ಗುಡುಗಿದರು. "ಹಿಂದೂ ಸಮಾಜವು ಎಲ್ಲವನ್ನು ಒಪ್ಪಿಕೊಳ್ಳುತ್ತದೆ ಆದರೆ, ಮಹಿಳೆಯರು ಮತ್ತು ಶೂದ್ರರ ಮೇಲೆ ಹೇರಿರುವ ಗುಲಾಮಗಿರಿಯನ್ನು ತೆಗೆದು ಹಾಕುವುದನ್ನು ಮಾತ್ರ ವಿರೋಧಿಸುತ್ತದೆ. ಆದ್ದರಿಂದಲೇ ಈಗ ಕಾನೂನು ಬಂದಿದೆ. ಈ ಕಾಯಿದೆಯೊಂದೇ ಹಿಂದೂ ಸಮಾಜದ ಮುನ್ನಡೆಗೆ ಮಾರ್ಗ" ಎಂದರು.

ಈ ಮಸೂದೆಗೆ ಒಪ್ಪಿಗೆ ಪಡೆಯಲು ಅವರು ಪಟ್ಟ ಪಾಡು ಅಷ್ಟಿಷ್ಟಲ್ಲ. ಅದರಲ್ಲೂ ವಲ್ಲಭಾಯಿ ಪಟೇಲ್ ಮತ್ತು ರಾಜೇಂದ್ರ ಪ್ರಸಾದ್ ಅವರಂತಹ ನಾಯಕರೂ ಈ ಮಸೂದೆಯನ್ನು ವಿರೋದಿಸಿದಾಗ ನಿರಾಶೆಗೊಂಡ ಅಂಬೇಡ್ಕರ್ ರಾಜಿನಾಮೆಯನ್ನೇ ಕೊಟ್ಟುಬಿಟ್ಟರು,

"ಗೃಹಲಕ್ಷ್ಮಿ"ಯೆಂದು ಪೂಜಿಸಿದ ಸಮಾಜ ಆಕೆಗೆ ಒಂದು ಕಾಸಿಗೂ ಹಕ್ಕು ನೀಡದೆ ಪೂಜಿಸಿದ್ದು, ಆ ಸಮಾಜದ ಅಸ್ವಸ್ಥತೆಯನ್ನು ತೋರಿಸುತ್ತದೆ, "ಓರ್ವ ಪತ್ನಿಯು ತನ್ನ ಪತಿ ಬದುಕಿರುವವರೆಗೆ ಆತನನ್ನು ಅನುಸರಿಸಬೇಕು. ಆತ ಗತಿಸಿದ ಮೇಲೂ ಅವನಿಗೆ ಅವಮಾನವಾಗುವಂತಹುದೇನನ್ನೂ ಮಾಡಬಾರದು. ಪತಿಯಾದವನು ದುರ್ಗುಣಿಯಾಗಿರಲಿ ಅಥವಾ ಪರಸ್ತ್ರೀಸಂಗ ಹೊಂದಿರಲಿ ಆತನನ್ನು ದೇವರೆಂದು ಪೂಜಿಸಬೇಕು" ಎಂಬ ಮನುವಿನ ಆದೇಶಗಳನ್ನು ಹಿಂದೂಗಳು ಚಾಚೂ ತಪ್ಪದೆ ಅನುಸರಿಸುತ್ತಿದುದನ್ನೂ ಅಂಬೇಡ್ಕರ್ ಖಂಡಿಸಿದ್ದಾರೆ.

ವೇದ ಪಠಣ, ಯಜ್ಞದಲ್ಲಿ ಪಾಲ್ಗೊಳ್ಳುವಿಕೆಗಳನ್ನು ಮಹಿಳೆಯರ ಪಾಲಿಗೆ ಇಲ್ಲವಾಗಿಸಿದ ಮನು, ಇದನ್ನು ಮಾಡಿದ ಮಹಿಳೆಯರು ಶೂದ್ರರಂತೆ ಮರಣದಂಡನೆಗೆ ಅರ್ಹರು ಎಂಬ ಶಿಕ್ಷೆ ವಿಧಿಸಿದ್ದ. "ಮಹಿಳೆ ಮತ್ತು ಪ್ರತಿ-ಕ್ರಾಂತಿ" ಎಂಬ ಲೇಖನದಲ್ಲಿ ಅಂಬೇಡ್ಕರ್ ಅವರು ಈ ವಿಷಯವನ್ನು ಪ್ರಸ್ತಾಪಿಸಿ, "ಮನು ಗಂಡಸರಿಗೆ ಹೆಂಡತಿಯರನ್ನು ಹೊಡೆಯುವ ಹಕ್ಕನ್ನು ನೀಡಿದ" ಎಂದು ಟೀಕಿಸಿದ್ದಾರೆ. ಬ್ರಾಹ್ಮಣನ ಹತ್ಯೆಯನ್ನು "ಮಹಾಪಾತಕ"ವೆಂದು ಪರಿಗಣಿಸಿದ ಮನು, ಕಾಲ ಕಸವೆಂದು ಭಾವಿಸಿದ್ದ ಮಹಿಳೆಯ ಹತ್ಯೆ ಮಹಾಪಾಪವಲ್ಲ ಎಂದಿದ್ದಾನೆ,

ಮನು ಮತ್ತು ಕೌಟಿಲ್ಯನನ್ನು ತುಲನಾತ್ಮಕವಾಗಿ ವಿಶ್ಲೇಷಿಸುವ ಅಂಬೇಡ್ಕರ್ ಅವರು. "ಕೌಟಿಲ್ಯನ ಕಾಲದಲ್ಲಿ ಮಹಿಳೆಯರು ತಮ್ಮ ಗಂಡಂದಿರ ಅಮಾನವೀಯ ಕೃತ್ಯಗಳ ವಿರುದ್ಧ ನ್ಯಾಯಾಲಯದಲ್ಲಿ ದೂರು ಸಲ್ಲಿಸಬಹುದಿತ್ತು. ಕೌಟಿಲ್ಯ, ಮನುವಿಗಿಂತಲೂ ಹಿಂದಿನವನೆಂದು ನೆನೆದರೆ, ಇದು ಅಚ್ಚರಿ ಹುಟ್ಟಿಸುತ್ತದೆ. ಕೌಟಿಲ್ಯನ ಕಾಲದಲ್ಲಿ ಮಹಿಳೆ ಮತ್ತು ಪುರುಷ ಸಮಾನರಾಗಿದ್ದರು. ಭಾರತದಲ್ಲಿ ಮಹಿಳೆಯ ಸ್ಥಾನ ಮಾನ, ಸ್ಥಿತಿ-ಗತಿಗಳು ಅಧೋಗತಿಗೆ ಇಳಿಯಲು ಮನುವೇ ಸಂಪೂರ್ಣ ಹೊಣೆ" ಎನ್ನುತ್ತಾರೆ.

ಅಂಬೇಡ್ಕರ್ ಅವರು ಮಹಿಳೆಯರ ಹಕ್ಕಿಗಾಗಿ ತಾವು ಮಾಡಿದ ಹೋರಾಟದ ಮೂಲವನ್ನು ತಮ್ಮ ಗುರು ಮಹಾತ್ಮಾ ಫುಲೆ ಅವರಲ್ಲಿ ಗುರುತಿಸುತ್ತಾರೆ. ರಾಜಾರಾಂ ಮೋಹನ್ ರಾಯ್, ಲಿಖಿತ್‌ವಾಡಿ, ರಾನಡೆ, ಅಗರ್‌ಕರ್ ಮುಂತಾದ ಚಿಂತಕರ ಹೋರಾಟಗಳೂ ಅಂಬೇಡ್ಕರ್ ಅವರ ನಿಲುವನ್ನು ರೂಪಿಸಿದ್ದರೂ, ಈ ನಾಯಕರ

ಹೋರಾಟ ಕೌಟುಂಬಿಕ ಬದಲಾವಣೆಗೆ ಮಾತ್ರ ಸೀಮಿತ ಗೊಂಡಿತ್ತು. ಆದರೆ ಫುಲೆ ಮತ್ತು ಅವರ ಪತ್ನಿ ಸಾವಿತ್ರಿ ಬಾಯಿ ಅವರುಗಳು ನಡೆಸಿದ ಹೋರಾಟ ಸಮಾಜದ ಎಲ್ಲ ವರ್ಗಗಳ ಮಹಿಳೆಯರಿಗೆ, ಎಲ್ಲ ಕ್ಷೇತ್ರಗಳಲ್ಲಿ ಸಮಾನತೆ ದೊರಕಿಸುವ ಉದ್ದೇಶ ಹೊಂದಿತ್ತು. ದುರಂತವೆಂದರೆ ಫುಲೆಯವರ ನಂತರದವರು ಉಳಿಗಮಾನ್ಯ ಪದ್ಧತಿಯ ವಿರುದ್ಧದ ಹೋರಾಟವನ್ನು ಮುಂದುವರೆಸಲಿಲ್ಲ. ಆದರೆ ಮುಂದಿನ ದಿನಗಳಲ್ಲಿ ಈ ಹೋರಾಟ ಅಂಬೇಡ್ಕರ್ ಮತ್ತು ಬ್ರಾಹ್ಮಣೇತರ ಚಳವಳಿಯಲ್ಲಿ ಹಾಗೂ ಎಡಪಂಥೀಯರ ಹೋರಾಟಗಳಲ್ಲಿ ಮತ್ತೆ ಕಾಣಿಸಿಕೊಂಡಿತು.

ಮಹಿಳೆಯರ ಶೈಕ್ಷಣಿಕ ಪ್ರಗತಿಗಾಗಿ ಅವಿರತ ಶ್ರಮಿಸಿದ ಅಂಬೇಡ್ಕರ್ "ಶಿಕ್ಷಣವು ಮಹಿಳೆಯರಿಗೆ ತಮ್ಮ ಹಕ್ಕುಗಳ ಬಗ್ಗೆ ಅರಿವು ನೀಡುತ್ತದೆ" ಎಂಬ ಸಂದೇಶವನ್ನು ಸಾರಲು ಅಸಂಖ್ಯಾತ ಮೇಳ-ಸಮ್ಮೇಳನ, ಸಭೆ, ಗೋಷ್ಠಿಗಳನ್ನು ನಡೆಸಿದರು. ಔರಂಗಾಬಾದ್‌ನಲ್ಲಿದ್ದ ಅವರ ಮಿಲಿಂದ್ ಕಾಲೇಜಿನಲ್ಲಿ ಎಲ್ಲ ವರ್ಗದ ಮಹಿಳೆಯರಿಗೆ ಉಚಿತ ಪ್ರವೇಶ ಸೌಲಭ್ಯ ಒದಗಿಸಿದರು. ಬಾಲಕಿಯರಿಗೆ ಪ್ರತ್ಯೇಕ ಶಾಲೆ ಮತ್ತು ವಸತಿ ಸೌಲಭ್ಯ ಕಲ್ಪಿಸಿದರು. ದಲಿತ ಮಹಿಳೆಯರು ತಮ್ಮ ಬೇಡಿಕೆಗಳ ಈಡೇರಿಕೆಗೆ ಸತ್ಯಾಗ್ರಹದ ಮಾರ್ಗ ಹಿಡಿಯಬೇಕೇ ಹೊರತು "ಬೇಡ" ಬಾರದು ಎಂದೂ ಕರೆನೀಡಿದರು.

ಮಹಿಳೆಯರ ಸಂಘಟನೆಯೂ ಅಂಬೇಡ್ಕರ್ ಅವರ ಹೋರಾಟದ ಒಂದು ಭಾಗವಾಗಿತ್ತು. "ಮಹರ್ ಡೇಸ್ಟಿ ವಾಟರ್ ಸತ್ಯಾಗ್ರಹ" ಮತ್ತು "ಕಾಲಾರಾಂ ಮಂದಿರ್ ಸತ್ಯಾಗ್ರಹ"ಗಳಲ್ಲಿ ಅಂಬೇಡ್ಕರ್ ಕರೆಯಿಂದಾಗಿ ಪ್ರೋತ್ಸಾಹಗೊಂಡ ಅಸಂಖ್ಯಾತ ಮಹಿಳೆಯರು ಭಾಗವಹಿಸಿದ್ದರು.

ಸಂವಿಧಾನದ ಶಿಲ್ಪಿ ಅಂಬೇಡ್ಕರ್ ಆ ತಮ್ಮ ಕೃತಿಯನ್ನು ಮಹಿಳೆಯರ ವಿಮೋಚನೆಯ ಸಾಧನವೆಂದೇ ಭಾವಿಸಿದ್ದರು. "ಈ ಸಂವಿಧಾನ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಮೂಡಿಸದಿದ್ದಲ್ಲಿ ನಾನು ಇದನ್ನು ಸುಟ್ಟುಹಾಕಲೂ ಹಿಂಜರಿಯುವುದಿಲ್ಲ" ಎಂದೂ ಅವರು ಘೋಷಿಸಿದ್ದರು.

ಭಾರತೀಯ ಸಮಾಜದ ಅತ್ಯಂತ ಕೆಳವರ್ಗದಲ್ಲಿದ್ದ ಶೋಷಿತರ ಮತ್ತು ಅಸ್ಪೃಶ್ಯರ ಸಾಮಾಜಿಕ ವಿಮೋಚನೆಗಾಗಿ ಅಂಬೇಡ್ಕರ್ ನಡೆಸಿದ ಹೋರಾಟವು ಆ ಸಮಯದ ಎಲ್ಲ ಮಿತಿಗಳ ಮಧ್ಯೆಯೇ ಗರಿ ಬಿಚ್ಚಬೇಕಿತ್ತು. ಅವರ ಜೀವನವೂ ಸಮಯದ ಮಿತಿಯ ಮಧ್ಯೆಯೇ ಮುಗಿಯಬೇಕಾಯಿತು.

ಕೃಪೆ : ಈಕ್ವಾಲಿಟಿ

ಆದರ್ಶ ಸ್ತ್ರೀ

"ಸಾವಿರಾರು ವರ್ಷಗಳ ನಿದ್ರೆಯಿಂದ ಏಳುತ್ತಿರುವ, ತನ್ನ ಮನಸ್ಸಿನ ಆಳವನ್ನು ಅರಸುವ, ಹಣೆಬರಹ, ಅರ್ಥರಹಿತ ವ್ರತಗಳನ್ನು ಕೈಬಿಟ್ಟು ಸುತ್ತಣ ಪ್ರಪಂಚಕ್ಕೆ ಸ್ಪಂದಿಸುವ, ಇತಿಹಾಸದ ಚಕ್ರಕ್ಕೆ ಧಕ್ಕೆಯನ್ನೊಡ್ಡಿ "ನನ್ನ ಚರಿತ್ರೆ ಎಲ್ಲಿ" ಎಂದು ವಿಚಾರಿಸುವ, ನನಗೆ ಇಂದಿನ ವಿಶ್ವದಲ್ಲಿ ಸಮಾನತೆ ಬೇಡ-ನನಗೆ ಬೇರೊಂದು ವಿಶ್ವವನ್ನೇ ರಚಿಸುವುದಿದೆ, ಎಂದು ಹಾತೊರೆಯುವ "ನನಗೆ ಲಿಂಗಭೇದವಿಲ್ಲದ ವಿಮುಕ್ತ ಮಾನವನಿರುವ ನೂತನ ಮಾನವನ ಆವಿಷ್ಕಾರವಾಗುವ ಜಗತ್ತಿನ ಸೃಷ್ಟಿಯಾಗಬೇಕು", ಎಂದು ತಹ ತಹಿಸುವ ಸ್ತ್ರೀ."

ಮರಾಠಿ ಲೇಖಕಿ ಛಾಯಾ ದಾತಾರ್ ಅವರ
"ಸ್ತ್ರೀ-ಪುರುಷ್‌ನಲ್ಲಿ,"

ಸಾವಿತ್ರಿ

ಶ್ರೀಮತಿ ಹೆಚ್. ಎಸ್. ಕಾತ್ಯಾಯಿನಿ ಅವರ ಈ "ಸಾವಿತ್ರಿ" ಕಥೆ ಅವರ ಮಾಲಾ ಮತ್ತು ಇತರ ಕಥೆಗಳು ಕಥಾ ಸಂಕಲನದಿಂದ ಆಯ್ದುದ್ದು ವೃತ್ತಿಯಲ್ಲಿ ಭೌತ ಶಾಸ್ತ್ರದ ಪ್ರಧ್ಯಾಪಕರಾಗಿದ್ದು ಇವರು "ಗಂಗಾ ತರಂಗ" ಗೌರಿ ಮತ್ತು ಇತರ ಕಥೆಗಳು ಮುಂತಾದ ಸಾಹಿತ್ಯ ಕೃತಿಗಳನ್ನಷ್ಟೇ ಅಲ್ಲದೆ ಭೌತ ಶಾಸ್ತ್ರದ ಪಠ್ಯ ಪುಸ್ತಕಗಳನ್ನು ರಚಿಸಿದ್ದಾರೆ. ಬರವಣಿಗೆಯ ಜೊತೆಗೆ ಚಿತ್ರ ಕಲೆಯಲ್ಲಿ ಅವರ ಪ್ರತಿಭೆ ಮಿಂಚಿದೆ. ನಿಸರ್ಗದ ಹಲವಾರು ಮುಖಗಳನ್ನು ಇವರು ತಮ್ಮ ಕುಂಚದಲ್ಲಿ ಸೆರೆ ಹಿಡಿದಿದ್ದಾರೆ.

"ಸಾವಿತ್ರೀ! ಊಟಕ್ಕೆ ಬರೋಲ್ಲವೇನೇ? ಹಸಿವಾಗ ಲಿಲ್ಲವಾ?" ಎಂದು ರಾಧಮ್ಮನವರ ಕರೆ ಬಂತು.

"ಏನ್ರೀ, ಇನ್ನೂ ಊಟ ಆಗಿಲ್ಲವಾ? ಆಯ್ತೂಂದ್ರಿ ನಾನು ಕೇಳಿದಕ್ಕೆ ಆಗಲೇ ಹನ್ನೆರಡೂವರೆ ಆಯ್ತು, ಏಳ್ರಿ ಊಟ ಆದ ಮೇಲೆ ತೋಳು ತಿರುಗಿಸಿದರಾಯ್ತು" ಎಂದೆ ನಾನು.

"ಇಲ್ರೀ ಊಟಕ್ಕೇನು ಅವಸರ, ಇರಿ, ಅತ್ತಲಾಗೇ ತಿರುಗಿಸಿಯೇ ಬಿಡುವ" ಎಂದು ಸ್ವೆಟರ್ ಮುಂದುವರೆಸಿದರು ಸಾವಿತ್ರಮ್ಮ.

ಬಾಗಿಲವರೆಗೆ ಬಂದ ಶಾರದಮ್ಮನೋರು ಸಾವಿತ್ರಮ್ಮನವರಿನ್ನೂ ನಮ್ಮ ಮನೆಯ ಮೆಟ್ಟಲಿಂದ ಏಳದಿರುವುದು ನೋಡಿ, "ಸರಿಹೋಯ್ತು, ಹಗಲು ರಾತ್ರಿ ಮೆಟ್ಟಿಲ ಮೇಲೆ ಕುತ್ಬಿಡಿ. ಹೊಟ್ಟೇಲೇನು ದೆವ್ವ ಇದೆಯೆ!" ಎಂದು ಹಾಗೆ ತಮ್ಮ ಮನೆ ಮೆಟ್ಟಿಲಿಳಿದು ನಾವು ಕೂತೆಡೆ ಬಂದರು ನಮ್ಮ ಮನೆಯ ಎದುರು ಮನೆಯೇ ರಾಧಮ್ಮನವರ ಮನೆ.

"ಈ ಪ್ಯಾಟರ್ನ್ ಚೆನ್ನಾಗಿದೆ ರೀ" ಎಂದರು ರಾಧಮ್ಮ "ಸಾವಿತ್ರಮ್ಮನವರಿಗೆ ಹೇಳ್ರಿ, ಅದು ನನಗಲ್ಲ, ಕೀರ್ತಿ" ಎಂದೆ ನಾನು. "ಸಾವಿತ್ರೀ. ಈಗಲೇ ತೋಳಿನ ಬಾರ್ಡರೂ ಹಾಕಿಬಿಡೆ, ಆಮೇಲೆ ಯಾಕೆ ಒದ್ದಾಡೋದು ಎಂದು ರಾಧಮ್ಮ ತಮ್ಮ ಬುದ್ಧಿವಾದ ಹೇಳಿದರು, ಸಾವಿತ್ರಮ್ಮ 'ಹೂ' ಎನ್ನಲಿಲ್ಲ.

"ರೀ ಸಾವಿತ್ರಮ್ಮ ಊಟ ಮಾಡಿ ಬರ್ರಿ" ಎಂದು ನಾನು ಎಚ್ಚರಿಸಿದೆ. "ಹೋಗ್ರಿ ನಾನೂಟ ಮಾಡೋಲ್ಲ" ಎಂದರು ಸಾವಿತ್ರಮ್ಮ.

"ಎಷ್ಟು ದಿನ ಊಟ ಬಿಡ್ತೀಯೇ? ಹೊಟ್ಟೆ ಎಷ್ಟು ದಿನ ಕೇಳಿಯಾತು. ಏಳು" ಎಂದರು ರಾಧಮ್ಮ.

"ಹೀಗೇ ಸಾಯ್ತೀನಿ ಹೋಗಮ್ಮ" ಎಂದು ಸಾವಿತ್ರಮ್ಮ ಸಿಡುಕಿದರು.

"ಹುಟ್ಟಿದ ಹಬ್ಬದ ದಿನ ಇಂಥಾ ಮಾತೇನೆ ಆಡೋದು? ಕೆನ್ನೆಗೆ ಹೊಡ್ಕೊ, ಅಲ್ಲಾ ಬೆಳಿಗ್ಗೆಯಿಂದ ಚೆನ್ನಾಗಿದ್ದವಳು ಈಗ್ಯಾಕೆ ಹೀಗೆ? ಲಕ್ಷಣವಾಗಿ ಗುಡಿಸಿ, ಸಾರಿಸಿ, ಚಿತ್ತಾರದ ರಂಗೋಲೆ ಹಾಕಿದ್ದೀ. ಬೃಂದಾವನವಂತೂ ದೃಷ್ಟಿಯಾಗೋ ಹಾಗಿದೆ, ಒಂದು ರಾಶಿ ಪಾತ್ರೆ ತೊಳೆದಿದ್ದೀ, ಹಸಿವಾಗಲಿಲ್ಲವೇನೇ? ಏಳು ಊಟಕ್ಕೆ ನನಗೆ ತಡೆಯೋಲ್ಲ ಹಸಿವು" ಎಂದರು ರಾಧಮ್ಮ.

"ಈ ಹಾಳು ಹೊಟ್ಟೆ ಯಾಕೆ ಕೊಟ್ಟನೋ ದೇವರು, ಇದರಿಂದ ಎಲ್ಲರ ಹತ್ರಾನೂ ಅನ್ನಿಸಿಕೊಳ್ಳಬೇಕು. ನಾಚಿಕೆಯಿಲ್ಲದ ಜನ್ಮ ನಂದು. ಭೂಮಿಗೊಂದು ಭಾರ" ಎಂದರು ಸಾವಿತ್ರಮ್ಮ.

"ಸುಮ್ಮನೆ ಏಳು ಸಾವಿತ್ರಿ, ನಿನ್ನೆಯಲ್ಲ ಗಂಡನಿಗೂ ಮಕ್ಕಳಿಗೂ ಊಟಕ್ಕಿಟ್ಟು ಕಟ್ಟುಪವಾಸ ಮಾಡಿದ್ದೀ. ಆದಕ್ಕೇ ಇಲ್ಲೇ ಇವತ್ತು ಎಣ್ಣೆ ಬತ್ತಿ ಎರಕೊಂಡು

ಒಂದಿಷ್ಟು ಪಾಯಸ ಊಟ ಮಾಡಲಿ ಎಂದು ಮಾಡಿದೆ. ನಿನಗೆ ಎಲ್ಲಿಲ್ಲದ ಬಿಗುಮಾನ" ಎಂದರು ಟೀಕಿಸುವ ಹಾಗೆ ರಾಧಮ್ಮ,

"ಅಮ್ಮಾ, ನೀನು ನನ್ನ ದೂರೋದೇ ಯಾವಾಗಲೂ ಮರ್ಯಾದೆ ಕಳಕೊಂಡು ಬಾಳೋಕಿಂತ ಬಾವಿಗೆ ಬೀಳೋದು ಲೇಸು" ಎಂದು ಸಾವಿತ್ರಮ್ಮ ಬಿಕ್ಕಿದರು.

"ರೀ ಏನಾಯ್ತು ರೀ?" ಎಂದು ಭದ್ರಮ್ಮ ಕೇಳಿದರು. "ಎದ್ದು ಊಟ ಮಾಡಬಾರದೆ" ಎಂದರು,

"ಚೋಟುದ್ದ ಹುಡುಗರ ಹತ್ರ ಎಲ್ಲಾ ಅನ್ನಿಸ್ಕೊಬೇಕು. ನೋಡ್ರಿ ರಾಘು ಅಂತಾನೆ, —"ನೀನೇನು ಖರ್ಚು ಕಮ್ಮಿ ಮಾಡ್ತೀಯಾ ಅಣ್ಣಂಗೆ? ನೀನು ನಿನ್ನ ಗಂಡ ಎರಡು ಮಕ್ಕಳು ಇಲ್ಲೇ ಝಾಂಡ ಹಾಕಿದ್ದೀರಿ. ಎಷ್ಟು ವರ್ಷಾಯ್ತು" ಅಂತಾನೆ, ನನ್ನನ್ನೂ ಸರಿಯಾದೋರಿಗೆ ಕೊಟ್ಟಿದ್ರೆ, ನಾನ್ಯಾಕ್ರೀ ಇವರ ಮನೆ ಬಾಗಿಲಲ್ಲಿ ಬಿದ್ದಿರ್ತಿದ್ದೆ? ಉಪ್ಪೋ, ಸೊಪ್ಪೋ ತಂದ್ಹಾಕಿದ್ರೂ ಏನೋ ಬೇಯಿಸಿಕೊಂಡು ತಿಂತಿದ್ವಿ. ತೀರಾ ಏನೂ ಕೆಲಸ ಇಲ್ಲದೆ ಎರಡು ತಿಂಗಳಿಂದ ಇದ್ದಾರಲ್ಲಾ? ನಾನೇನ್ರಿ ಬೇಯಿಸಲಿ? ಅಕ್ಕಿಲ್ಲ, ಬೇಳೆಯಿಲ್ಲ, ಉಪ್ಪು ಕೂಡ ಇಲ್ಲ. ಸೌದೆ ತಂದು ಎಷ್ಟು ದಿನವಾಯ್ತೋ! ನನ್ನ ಹಣೆ ಬರಹ, ಮಕ್ಕಳನ್ನು ಅಜ್ಜಿ ಮನೆಗೆ ಊಟಕ್ಕೆ ಬಿಡದೆ ಏನ್ಮಾಡ್ಲಿ? ಉಪವಾಸ ಹಾಕ್ಲಾ? ನನ್ನಾಳೊಟ್ಟೆ ತಡೆಯುತ್ತಾ? ಒಂದು ದಿನ ತಡೆದೀತು. ಎರಡು ದಿನ ತಡೆದೀತು. ಮೂರನೆ ದಿನ ತಿನ್ನೋಣ ಅನ್ನಿಸುತ್ತೆ. ಇನ್ನು ನಾಉಂಡು ಅವರನ್ನ ಬಿಡೋಕಾಗುತ್ತಾರೀ? ನಾವೇನೋ ನಾಲ್ಕು ಜನವೂ ನಮ್ಮ ತಂದೆಗೆ ಭಾರವಾಗಿದ್ದೀವಿ, ಆದರೆ ನಾನೇನು ಮಾಡಬಲ್ಲೆ ಹೇಳಿ" ಎಂದು ಸಾವಿತ್ರಮ್ಮ ಕಣ್ಣೀರು ಹಾಕಿದರು.

"ನಿಮ್ಮ ಯಜಮಾನ್ರನ್ನ ಕೆಲಸ ಹುಡುಕೋಕೆ ಹೇಳಿ ಕೆಲಸ ಹುಡುಕದಿದ್ರೆ ಅನ್ನ ಹಾಕಬೇಡಿ" ಎಂದೆ ನಾನು.

"ಸರಿ ಅವನು ಕೆಲಸ ಮಾಡಿದ್ಹಾಗೆ ಇದೆ. ಇವತ್ತಿನ ವರೆಗೆ ನಾನು ಕಂಡಾಗಿನಿಂದ ನನ್ನಳಿಯರಿಗೆ ನೂರು ಕೆಲಸ ಆಗಿರಬಹುದು. ಮೇಷ್ಟ್ರು, ಕ್ಲಾರ್ಕು, ಸೋಪಿನ ಅಂಗಡೀಲಿ, ಫ್ಯಾಕ್ಟರೀಲಿ, ಎಲ್ಲಾ ತರದ್ದೂ ಎಲ್ಲಾ ಒಂದು ಎರಡು ದಿನ, ಇನ್ನೊಂದು ನಾಲ್ಕು ದಿನ, ಇನ್ನೊಂದು ಎಂಟು ದಿನ. ಎರಡು ತಿಂಗಳ ಮೇಲೆ ಕೆಲಸ ಮಾಡಿದ್ದು ನಾನು ಕಾಣೆ ಕಾಣೆ, ಸರಿ ಎರಡು ತಿಂಗಳ ಕೆಲಸ, ಆರು ತಿಂಗಳು ರೆಸ್ಟು, ಮತ್ತೊಂದು ತಿಂಗಳು ಕೆಲಸ, ಮತ್ತೆಂಟು ತಿಂಗಳು ರೆಸ್ಟು. ನಾನ್ಯೇನೇಳಲಿರಿ ಅವನ ಪುರಾಣ" ಎಂದು ರಾಧಮ್ಮ ತಮ್ಮ ಸರಾಗವಾದ ಒರಟೂ ಅಲ್ಲದ ಮೃದುವೂ ಅಲ್ಲದ ಭಾಷೆಯಲ್ಲಿ ಸಾವಧಾನವಾಗಿ ವಿವರಿಸಿದರು,

"ನೀವ್ಯಾಕ್ರೀ ಮನೆಲಿಟ್ಕೊಂಡ್ರಿ ಅಳಿಯನ್ನ? ಮದುವೆಯಾದ ಹೊಸದರಲ್ಲಿ ನನ್ನೆಂಡ್ತೀ ಅನ್ನೋ ಕಕ್ಕುಲಾತಿ ಇರುವಾಗಲೇ ಬೇರೆ ಕಳಿಸಬಾರದಿತ್ತೇನ್ರಿ?" ಎಂದು ನಾನು ಆಕ್ಷೇಪಿಸಿದೆ,

"ಅಲ್ರೀ ಅಮ್ಮಯ್ಯಮ್ಮ ನೀವು ಬಂದು ಆರು ವರ್ಷ ಆಯ್ತು, ಎದುರು ಮನೆಗೆ ನೀವು ಕಾಣೋ ಹಾಗೆ ಎಂಟು ಕಡೆ ಕೆಲಸಾದುವು ಅದರ ಹಿಂದಕ್ಕೆ ೨೦ ವರ್ಷದಿಂದ ಬಲ್ಲೆ ನನ್ನ ಅಳಿಯ ರಾಮಪ್ಪನ್ನ, ಒಂದ್ಸಲ ನಮ್ಮ ಯಜಮಾನ್ರು ನನ್ನ ತಮ್ಮನ ಪಕ್ಕದ ಹಳ್ಳೀಲಿ ಒಂದು ಮನೆ ಮಾಡಿ, ಸಾವಿತ್ರಿ ಅವಳ ಚೊಚ್ಚಲು ಮಗು-ಈಗ ಆ ಮಗು ಇದ್ದಿದ್ರೆ ಅದಕ್ಕೆ ೧೫ ವರ್ಷ S.S.L.C, ಕಟ್ಟಬೇಕಿತ್ತು-ಅದೂ ಅದರ ಹಿಂದೆ ನಾಲ್ಕು ಮಕ್ಕಳು ಗೋವಿಂದಾ ಅಂದುವು. ಇವೆರಡರ ಜೊತೆ ಅವೂ ಇದ್ದಿದ್ರೆ ಸಾವಿತ್ರೀನ ಕಿತ್ತು ತಿಂದು ಬಿಡುತ್ತಿದ್ದವು. ಅಲ್ಲ ಅವು ಸತ್ತದ್ದು ಸಂತೋಷಾಂತಲ್ಲ, ಏನೋ ವಿಧಿ ಇದ್ದಿದ್ರೆ ಗಂಜಿಯೊ ನೀರೊ ಕುಡಿಯೋವು-ಹೋಗಲಿ ಅಲ್ಲಿ ಮನೆ ಮಾಡಿ, ಒಂದು ತಿಂಗಳ ಕಾಳು ಕಡ್ಡಿ ಉಪ್ಪು ಮೆಣಸು ಎಲ್ಲಾ ತಂದ್ಹಾಕಿ ಅಲ್ಲಿ ಕೂಲಿ ಮಠದಲ್ಲಿ ರಾಮಪ್ಪನ್ನ ಮೇಷ್ಟ್ರಾಗಿಟ್ಟು ೧೫ ಸೇರು ಅಕ್ಕಿ, ೧೦ ಸೇರು ರಾಗಿ, ತಿಂಗಳಿಗೆ ೧೦ ರೂ. ಕೊಡೋ ಹಾಗೆ ಗೊತ್ತು ಮಾಡಿ ಬಂದ್ರು ರೀ. ಹಾಲು ಮೊಸರಿಗೂ ಕೂಡ ಗೊತ್ತು ಮಾಡಿದ್ರು ನಾಲ್ಕು ತಿಂಗಳಾಯ್ತು ನೋಡಿ, ನನ್ನ ತಮ್ಮನಿಂದ ಅರ್ಜೆಂಟ್ ಕಾಗದ ಬಂತೂಂತ ಹೋಗಿ ಸಾವಿತ್ರಿ ಮಗು ತೊಟ್ಟಿಲ ಸಮೇತ ಕರಕೊಂಡು ಬಂದರು.

"ಅದ್ಯಾಕ್ರಿ? ಅವರ್ಬ್ಬಾಣೆ ಅವರಿಗೆ. ಅಲ್ಲೇ ಬಿಡಬಾರದಾಗಿತ್ತಾ? ನಿಮಗೇನಷ್ಟು ಆತುರ ಆಗಿತ್ತು? ಎಂದೆ ನಾನು.

"ಅಲ್ರೀ....ಕಾಣ್ತಾ ಕಾಣ್ತಾ ನಾಕು ದಿನದಿಂದ ಸಾವಿತ್ರೀಗೆ ಅನ್ನವಿಲ್ಲ, ಮಗೂಗೆ ಹಾಲಿಲ್ಲ. ಮನೇಲಿ ಒಂದ್ಕಾಳು ಅಕ್ಕಿ ಇಲ್ಲ. ಬೇಳೆ ಇಲ್ಲ. ಮಗು ಅಳ್ತಾ ಇದೆ...."

"ಅಲ್ರೀ ರಾಮಪ್ಪನೋರೆಲ್ಲಿದ್ರು ರೀ...." "ರಾಮಪ್ಪ ದೇಶಾಂತರ ಹೋಗಿ ತಿಂಗಳಾಗಿತ್ತು, ಸ್ಕೂಲು, ಕೆಲಸ ಬಿಟ್ಟು ಎರಡು ತಿಂಗಳಾಗಿತ್ತು, ಅಲ್ರೀ ಅಲ್ಲಿ ಕೂತ್ಕಡೆ ಎರಡಕ್ಷರ ತಿದ್ದಾಕೋಕಾಗೊಲ್ಲವೇನ್ರೀ....? ಆದೂ ಕೂಡ ಮೈ ಬಗ್ಗದೆ ಮಠಕ್ಕೇ ಹೋಗದಿದ್ರೆ ಯಾರ್ರೀ ಅಕ್ಕಿ ಕೊಡ್ತಾರೆ? ರಾಗಿ ಕೊಡ್ತಾರೆ?" ಎಂದರು ರಾಧಮ್ಮ.

"ನನ್ನಮ್ಮ ಯಾಕೋ ಅಲ್ಲಿಗೆ ಹೋದವನು, ಸಾವಿತ್ರಿ ಅಳ್ತಿರೋದು ನೋಡಿ, ವಿಷಯ ಎಲ್ಲಾ ತಿಳಿದು ಒಂದಿಷ್ಟು ಕಾಫಿ ತಾನೇ ಮಾಡಿ, ಅವಲಕ್ಕಿ ತರಿಸಿ ತಿನ್ನಿಸಿ. ತಕ್ಷಣ ಬಸ್ಸಿನಲ್ಲಿ ಕಾಗದ ಕಳಿಸಿದ, ಆನೇಕಲ್‌ಇಂದ ಇಲ್ಲಿ ಒಂದು ಘಂಟೆಗೆ ಬಂತು ಸಮಾಚಾರ ನಮ್ಮ ಯಜಮಾನ್ರು ಮೊದಲನೇ ಮಗಳೂಂತ ಅದ್ದೂರಿಯಾಗಿ ಸಾಕಿದ್ದಕ್ಕೂ, ತಂಗಿ ಮಗಾಂತ ಕೊಟ್ಟಿದ್ದಕ್ಕೂ. ಒಂದಿಷ್ಟು ಅನ್ನ ಇಲ್ಲದೆ ಭಂಗ ಪಡೋದು ಬಂತಲ್ಲಾಂತ ಕೊರಗಿ," ನಾನಿರೊವರೆಗೆ ಗಂಜಿ ಕುಡಿದರೂ ಸರಿ, ಈ ಮನೆ ಮೆಟ್ಟಿಲು ಬಿಟ್ಟು ಸಾವಿತ್ರೀನ್ನ ಕಳಿಸೋಲ್ಲಾಂತ ಇಟ್ಕೊಂಡ್ರು ನೋಡಿ. ಹನ್ನೆರಡು ವರ್ಷಾಯ್ತು. ಸಾವಿತ್ರಿ ಮುಂದುಗಡೆ ರೂಮಲ್ಲಿ ಸಂಸಾರ ಹೂಡಿ, ಅಲ್ಲಿ ಒಲೆ ಉರುವ್ತಾಳೆ. ಅವನು ಕೆಲಸ ಬಿಟ್ಟಾಂದ್ರೆ ನಮ್ಮ ಜತೆ ಊಟ, ಹೇಗೋ ನನ್ಮಗಳು ನನ್ನ ಕಣ್ಣ ಮುಂದೆ ಇದ್ದಾಳೆ ಸದ್ಯ ಎಂದು ರಾಧಮ್ಮ ನೊಂದು ನುಡಿದರು.

"ತಂಗಿ ಮಗಾಂತ ಕೊಟ್ಟೇ ಈ ಗತಿ, ಮದುವೆ ಯಾದ್ರೂ ಮಾಡದೆ ಇದ್ರೆ ಓದಿಯಾದ್ರೂ ಓದ್ತಿದ್ದೆ" ಎಂದರು ಸಾವಿತ್ರಮ್ಮ.

ಅದೇಗ್ರಿ ಭದ್ರಮ್ಮನೋರೆ? ಅವರವರ ಅದೃಷ್ಟ. ಹಣವಿದ್ದೋನ್ನ ಕೂಡಿದರೂ ಋಣವಿದ್ದಷ್ಟೇ-ಅಂತ ಗಾಧೆ. ನಾವೇನು ಕುಲಹೀನಂಗೆ ಕೊಟ್ಟೆವಾ? ಬಲಹೀನಂಗೆ ಕೊಟ್ಟೆವಾ? ಕಡಿದ್ರೆ ಎರಡಾಳು ಆಗೊ ಹಾಗಿದ್ದಾನೆ, ಕುಂಟನೇ? ಕುರುಡನೇ? ರಾಮಪ್ಪ ಯಾತಕ್ಕೆ ಕಮ್ಮಿಯಾಗಿದ್ದಾನೆ ಹೇಳಿ ಈಗಲೂ ನೋಡೋಕೆ ಬಂಗಾರ. ಮದುವೆ ಆಗುವಾಗ ಕೆಲಸದಲ್ಲೂ ಇದ್ದ. ಇನ್ನು ಮದುವೆಯಾದ ಮೇಲೆ ಇಪ್ಪತ್ತು ಕೆಲಸಾನ ನಲವತ್ತು ಸಲ ಬಿಡ್ತಾನೆ ಅಂತ ಯಾರಿಗ್ರೀ ಗೊತ್ತು? ಆರಿಸಬಹುದು ಮಾನ ಆದ್ರೆ ಅದೃಷ್ಟ ಬರೆಯೊಕಾಗುತೇನ್ರಿ!" ಎಂದರು ರಾಧಮ್ಮ.

"ಹೌದು" ಎಂದೆ ನಾನು. "ಇಂಥಾದೆಷ್ಟೋ ಮೋಸಗಳು ದಿನವೂ ನೋಡ್ತೇವೆ, ಒಳ್ಳೇ ಗಂಡೆಂದು ಕೊಟ್ಟು ಬವಳಿ ಪಡೋದೆಷ್ಟು? ಉಪಯೋಗವಿಲ್ಲ ಅನಿಸಿಕೊಂಡ ರೋಗಿಷ್ಟ ಗಂಡುಗಳೂ ಕೂಡ ನೇರ್ಪಾಗಿ ಸಂಸಾರ ಹೊರೆದಿರೋದೆಷ್ಟು? ಯಾರೂ ಹೇಳೋಕಾಗಲ್ಲ ಎಂದರು ಭದ್ರಮ್ಮ.

"ಮದ್ವೆ ಮದ್ವೆ ಅಂತ ಹನ್ನೆರಡು ವರ್ಷ ತುಂಬಲಿಲ್ಲ ಕಟ್ಟಿದ" ಎಂದು ಸಾವಿತ್ರಮ್ಮ ಗೊಣಗಿದರು.

ಅಲ್ವೇ. ಆಗಿನ ಪದ್ಧತಿ. ಜನರ ಬಾಯಿಗೆ ಹೆದರಿದೆವು ಮಾಡಿದೆವು. ನಾನೇನೂ ದುಡ್ಡಿನಾಸೆಗೆ ಮೊಡ್ಕೊಳ್ಳಲಿಲ್ಲ, ಆಸ್ತಿ ಆಸೆಗೆ ಮುದುಕಂಗೆ ಕೊಡಲಿಲ್ಲ, ಈಗಿನ ಕಾಲ ಸುಶೀಲನ್ನ ನೋಡಿ, ಹದಿನಾರಾಯ್ತು; ಇನ್ನೂ ಮದುವೆಯಿಲ್ಲ, ಹಾಗೆಂದ ಮಾತ್ರಕ್ಕೆ ಅವಳೋದುತ್ತಿದ್ದರೂ ನಮಗೆ ಯೋಚನೆಯಿಲ್ಲವಾ? ಯಾವಾಗಪ್ಪ ಸುಶೀಲಂಗೆ ಗಂಡ ಬರೋದು ಅಂತ ಯೋಚನೆಯಿಲ್ಲವೆ? ಹೆಣ್ಣಾದ ಮೇಲೆ ಒಂದು ಮದುವೆ ಮಾಡಬೇಡವೆ? ಅಥವಾ ಹಾಗೇ ಬಿಟ್ಟಿದ್ರೆ ನಿನ್ನ, ನಮ್ಮಪ್ಪ ನಮ್ಮಮ್ಮ ಮದ್ವೆ ಮಾಡಲಿಲ್ಲಾಂತ ಜರೀತಿದ್ದೆಯೋ ಏನೋ" ಎಂದರು ರಾಧಮ್ಮ.

"ಹೋಗಮ್ಮಾ ಮದುವೆ ಯಾರಿಗೆ ಬೇಕಿತ್ತು"? ಎಂದರು ಸಾವಿತ್ರಮ್ಮ. "ಹಾಗಂದ್ರೆ ಆಗುತ್ತಾ ರೀ? ಮದುವೆ ಆಗಿರೋದರಿಂದ ಹೀಗಂತಾಳೆ" ಎಂದರು ರಾಧಮ್ಮ.

"ರೀ ಸಾವಿತ್ರಮ್ಮ. ನಿಮ್ಮ ತಂದೆ ತಾಯಿಗಳು ಇಷ್ಟು ಪ್ರೀತಿಯಿಂದ ಜವಾಬ್ದಾರಿ ವಹಿಸೋದೆ ಹೆಚ್ಚು, ಇನ್ನು ಆಕ್ಷೇಪಣೆ ಮಾಡಬೇಡಿ. ನಿಮ್ಮ ನಿಮ್ಮ ಅದೃಷ್ಟ. ಮನುಷ್ಯ ಏನ್ಮಾಡೋಕೆ ಸಾಧ್ಯ ಹೇಳಿ? ಏಳಿ ಅವರನ್ನೂ ಉಪವಾಸ ಬೀಳಿಸಬೇಡಿ ಊಟ ಮಾಡೇಳಿ" ಎಂದೆ ನಾನು.

"ಆಕ್ಷೇಪಣೆ ಅಲ್ಲಾರೀ, ನನಗೂ ಗೊತ್ತಾಗುತ್ತೆ. ಅವರಿಲ್ಲದಿದ್ರೆ ನಾನೆಲ್ಲಿ ಇರುತ್ತಿದ್ದೆ? ಎಷ್ಟು ಸಲ ತಡೆದ್ರೂ

ಒಂದೊಂದು ಸಲ ಮನಸ್ಸು ಕಿತ್ಹೋಗುತ್ತೆ. ಹುಡುಗರನ್ನ ಮಾತಾಡಿಸೋದು ಬಿಡೋಣ ಅಂದ್ರೆ ಆಗೋಲ್ಲ. ರಾಘುನ್ನ ಸೋಪ್ಪಾಕದ ಬಟ್ಟೆ ಕಲ್ಲುಮೇಲಿಡಬೇಡ ಸೋಪು ದಂಡ ಆಗುತ್ತೆ. ಬಕೆಟ್ಟಿಗೆ ಹಾಕು-ಎಂದೆ. ಅದೇ ಅಪರಾದ ವಾಯ್ತು" ಎಂದು ಮಾತ್ಶೊಮ್ಮೆ ಸಾವಿತ್ರಮ್ಮ ಬಿಕ್ಕಿದರು

"ಆದು ಸಾವಿತ್ರಿ ಸ್ವಭಾವ. ಒಂದು ಚೂರೂ ಪೋಲು ಮಾಡೋಲ್ಲ. ಪೋಲಾಗುತ್ತಿರುವುದು ನೋಡಿದ್ರೆ ತಡೆಯೋದೂ ಇಲ್ಲ, ಬಹಳ ಜಾಣತನ ಅವಳದು. ಇನ್ನೇನೂ ಬೇಡ. ಗಂಡ ಱರೂ, ಸಂಬಳ ತಂದಿದ್ರೂ ಸಾಕು. ಅಚ್ಚುಕಟ್ಟಾಗಿ ಸಂಸಾರ ಮಾಡುತ್ತಿದ್ದಳು, ಅವಳು ಗಂಡಸಾದ್ರೂ ಆಗಬೇಕಿತ್ತು. ಈ ಹುಡುಗರಿಗೆ ನೋಡಿ, ಪದಾರ್ಥದ ಬೆಲೆಯೇ ಗೊತ್ತಿಲ್ಲ ಅದು ಅಲ್ಲೇ, ಇದು ಅಲ್ಲೇ, ಅವು ಒಂದಕ್ಕೂ ಸಾವಿತ್ರಿ ಬುದ್ಧಿ ಇಲ್ಲ ಹಲ್ಲಿದ್ದೋರಿಗೆ ಕಡ್ಲೆ ಇಲ್ಲ, ಕಡ್ಲೆ ಇದ್ದೋರಿಗೆ ಹಲ್ಲಿಲ್ಲಾಂತ. ಆ ಕಡೆ ಮನೆ ಸರೋಜಮ್ಮನ್ನ ನೋಡಿ. ಗಂಡ ತರೋ ನೂರು ರೂಪಾಯಿ ನೂರು ದಾರಿ ಮಾಡ್ತಾಳೆ. ಒಂದು ಕಟ್ಟಿಲ್ಲ ಒಂದು ಕ್ರಮ ಇಲ್ಲ!" ಎಂದು ರಾಧಮ್ಮ ಮಗಳ ಅದೃಷ್ಟಕ್ಕೆ ಕನಿಕರಪಟ್ಟರು,

"ಏಳ್ರಿ ಸಾವಿತ್ರಮ್ಮ, ನಿಮ್ಮಮ್ಮ ನಿನ್ನನ್ನೂ ಹೊಗಳಿದ್ದಾದ್ರೂ ಕೇಳಿದರೋ ಇಲ್ಲವೋ ಏಳಿ, ಊಟ ಮಾಡಿ ಏನಾದ್ರೂ ಯೋಚನೆ ಮಾಡೋಣ. ನನಗೊಂದು ಅನ್ನಿಸುತ್ತೆ, ನೀವು ಊಟ ಮಾಡಿ ಬನ್ನಿ ಹೇಳ್ತೀನೆ" ಎಂದು ಸಾವಿತ್ರಮ್ಮ ರಾಧಮ್ಮನವರನ್ನು ಊಟಕ್ಕೆ ಕಳಿಸಿದೆ,

ರಾಧಮ್ಮನವರು ಊಟ ಮುಗಿಸಿ ಮೊದಲು ಈಚೆಗೆ ಬಂದರು. "ಸಾವಿತ್ರಿ ಅವರೇಕಾಯಿ ಕೋಡುಬಳೆ ಮಾಡುತ್ತಿದ್ದಾಳೆ ಅವಳ ಕೈಯಿನ ಕೋಡುಬಳೆ ಗರಗರಾಂತ ನಾಲಿಗೆ ಮೇಲಿಟ್ರೆನೆ ಕರಗುತ್ತೆ" ಎಂದರು ರುಚಿ ನೋಡು ಅಂತ ನನಗೆರಡು ಕೊಟ್ಟರು, "ರೀ ತಾತನಿಗೆ ಮೊದಲೆತ್ತಿಟ್ಟಿದ್ದೀರಿ ತಾನೇ? ಎಂದೆ.

"ರೀ ಭದ್ರಮ್ಮನೋರೇ. ನಿಮ್ಮ ಮಗಳ್ನೋಡ್ರೀ. ನನ್ನ ಮೂಗು ಕುಯ್ತಾರೆ. ನನ್ನ ಮರ್ಯಾದೆ ಮೂರು ಕಾಸಿಗೆ ಮಾಡ್ತಾರೆ, ಕೋಡುಬಳೆ ಮಾತು ತೆಗೆದು" ಎಂದರು ರಾಧಮ್ಮ.

"ಹೂ ಅವತ್ತು ಎರಡು ಸೇರು ಕಾಳು ಹಾಕಿ ಕೋಡುಬಳೆ ಮಾಡಿ ತಾತಂಗೆ ಎರಡೇ ಕೊಟ್ರಂತೆ ಕೇಳಿದ್ದಕ್ಕೆ ತಮ್ಮನ ಮನೇದು ಅಂದಿರಂತೆ" ಎಂದರು ಭದ್ರಮ್ಮ,

ಅಲ್ರೀ ಅವತ್ತು ನಮ್ಮಮ್ಮ. ಚಿಕ್ಕಮ್ಮ. ನನ್ನ ತಂಗಿ ತಂಗೀ ಮಕ್ಕಳು ನಮ್ಮನೇವ್ರು–ಇಷ್ಟು ಜನ ಎಷ್ಟಾಯಿತು? ತಲಾ ನಾಲ್ಕು ನಾಲ್ಕು ಎಂದರೆ ಎಷ್ಟಾಗುತ್ರಿ? ಅಮ್ಮಯ್ಯಮ್ಮನೋರಿಗೇನೋ ಸೇರು ಹಿಟ್ಟಿಗೆ ಎಷ್ಟಾಗುತ್ತೆ ಅನ್ನೋ ಅಂದಾಜು ತಿಳೀದು. ಆದರೆ ನೀವು ಅಡಿಗೆ ಮಾಡಿದೋರು, ನೀವ್ಹೇಳಿ?" ಎಂದರು ರಾಧಮ್ಮ.

"ಅದ್ಸರಿ ಆದ್ರೆ ಪಾಪ, ತಾತಂಗೆ ಐದಾರು ತೆಗೆದಿಟ್ಟು ಆಮೇಲೆ ಹಂಚಬೇಕಿತ್ತು ಎಂದರು ಭದ್ರಮ್ಮ,

"ಅಲ್ರೀ ನಾನೂ ಹಾಗೇ ಮಾಡಿದ್ದು, ಎಂಟು ಕೋಡುಬಳೆ ತೆಗೆದು ಅನಸೂಯ ಡಬ್ಬೀಲಿ ಹಾಕಿ ಬಾಯ್ಮುಚ್ಚಿಟ್ಟಿದ್ದೆ ರೀ, ರಾಘು ಮನೆಯೆಲ್ಲಾ ಹುಡುಕಿ ಪತ್ತೆ ಹಚ್ಚಿ ನಾಲ್ಕು ಗಿಟ್ಟಿಸಿದ, ಆಮೇಲೆ ಅಮ್ಮಯ್ಯಮ್ಮನೋರು ಬಂದ್ರು. ನಾನೇ ಇನ್ನೆರೆಡು ತೆಗೆದು. ರುಚಿ ನೋಡಿ ಅಂತ ಕೊಟ್ಟೆ, ಅದಕ್ಕೇ ಇವತ್ತು ಮತ್ತೆ ಮಾಡಿದ್ದು ಕೋಡುಬಳೆ ಎಂದರು ರಾಧಮ್ಮ. ತಾತ ಏನಂದ್ರು?" ಎಂದು ಕೇಳಿದೆ ನಾನು. "ಕೊಡೋಕೆ ಮನಸ್ಸು ಕೊಡದೆ ಇರೋಕೆ ಮನಸ್ಸು ಬರದು. ಹಿಂಜರಿದು ಹಿಂಜರಿದು ಒಂದು ತಟ್ಟೇಲಿಟ್ಟು ಮುಂದಿಟ್ರೆ ಎರಡು. ನಮ್ಮ ಯಜಮಾನ್ರು 'ಯಾರ ಮೂಗಿಗೆ?' ಎಂದರು ಇನ್ನೇನು ಮಾಡಲಿ? "ತಮ್ಮನ ಹೆಂಡತಿ ಕಳುಸಿದ್ಲು, ನಾನು ನಾಳೆ ಮಾಡ್ತೀನೆ' ಅಂತ ಮರ್ಯಾದೆ ಉಳಿಸಿಕೊಂಡೆ" ಎಂದರು ರಾಧಮ್ಮ,

ಅದ್ಸರಿ ನಾನು ಇವತ್ತು ಎಚ್ಚರಿಕೆ ಕೊಟ್ಟೆ ಮೊದಲೇ. ನೀವು ಆ ದಿನ ನನ್ನ ಕೈಗೆ ಕೊಟ್ಟ ಮೇಲೆ ಹೇಳಿದ್ರಿ-ಇದು ತಾತಂಗಿಟ್ಟಿದ್ದು ಅಂತ. ಮೊದಲೇ ಹೇಳಿದ್ರೆ? ಎಂದೆ ನಾನು,

"ರೀ ಭದ್ರಮ್ಮನೋರೆ, ಇಲ್ಕೇಳಿ. ಈಗ ಸಾವಿತ್ರೆಗೇನು ಮರ್ಯಾದೆಯಾದ ಕೆಲಸ ಸಿಗೋಲ್ವಾ, ಇದು ನಿಮ್ಮ ಮನಸ್ಸಲ್ಲೇ ಇರಲಿ. ನನಗ್ಯಾಕೋ ಈಗೆಲ್ಲೂ ಹೆಂಗಸರು ಮುಂದರಿದಿರೋದು ನೋಡಿ. "ನಮ್ಮ ಹಳೆ ಕಂದಾಚಾರ

ಬಿಟ್ಟು . ಪಾಸಾದರೆ ಸಾಕು, ಒಂದು ಕೆಲಸ ಹಿಡೀಲಿ ಸಾವಿತ್ರಿ" ಅಂತ ಅನ್ನಿಸುತ್ತೆ, ಅಂಥಾದೇನಾದ್ರೂ ಇದೆಯಾ?" ಎಂದು ಕೇಳಿದರು ರಾಧಮ್ಮ.

"ರಾಧಮ್ಮನೋರೇ ನಾನಿಷ್ಟೊತ್ತು ಅದೇ ಯೋಚಿಸಿದೆ. ನನಗೆ ತೋಚೋದು ಇದು, ಸಾವಿತ್ರಮ್ಮನೋರಿಗೆ ತಪ್ಪಿಲ್ಲದೆ ಕನ್ನಡ 'ಓದೋದು ಬರೆಯೋದು ಬರುತ್ತೆ. ರೂಡಿ ಗಣಿತದ ಲೆಕ್ಕ ಕೂಡ ರಂಗಂಣ್ಣಂಗೆ ಅವತ್ತು ಹೇಳಿಕೊಟ್ಟರು. ಅವರ III ಇಯರ್‌ವರೆಗೆ ಕಲಿತಿದ್ದೆಲ್ಲಾ ಜ್ಞಾಪಕ ಇಟ್ಟುಕೊಂಡಿದ್ದಾರೆ. ಚರಿತ್ರೆ. ಭೂಗೋಳ ಕೊಂಚ ಓದಿಕೊಂಡರೆ, ಹೊಲಿಗೆ ಹೇಗೂ ಬರುತ್ತೆ–ಹಾಡು ಚೆನ್ನಾಗೆ ಬರುತ್ತೆ. L.S. ಇನ್ನೂ ೩ ತಿಂಗಳಿದೆ ಪರೀಕ್ಷೆ ಮನಸ್ಸಿಟ್ಟು ಓದಿದ್ರೆ ಈ ವರ್ಷವೇ ಕನ್ನಡ L.S. ಪಾಸುಮಾಡಬಹುದು, ಅಷ್ಟಾದರೆ ಒಂದು ಸ್ಕೂಲ್ ಮೇಡಂ ಕೆಲಸ ಸಿಗಬಹುದು. ಇನ್ಯಾವ ಕೆಲಸವೂ ಅವರಿಗೆ ಸರಿಹೋಗಲ್ಲ," ಎಂದೆ ನಾನು,

"ಅಲ್ರೀ, ಸ್ಕೂಲ್ ಆಕೆ ಬಿಟ್ಟು ೧೮ ವರ್ಷ ಆಯ್ತು. ಮೂರು ತಿಂಗಳಲ್ಲಿ ಪಾಸು ಮಾಡ್ತಾಳೆಯೇನ್ರಿ? ನನಗೆ ನಂಬಿಕೆ ಸಾಲದು. ಆದರೆ ನಿಮಗೆ ಹಾಗೆ ತೋಚಿದ್ರೆ, ನಾನೇನೋ ಅವಳ ಮಕ್ಕಳನ್ನು ನೋಡಿಕೊಳ್ತೀನಿ. ಅವಳು ನಿಶ್ಚಿಂತೆಯಾಗಿ ಓದಲಿ. ಬೇಕಾದ್ದು ಹೇಳಿಕೊಡೋಕೆ ರೋಜಿ S.S.L.C. ರಂಗಣ್ಣ ಜತಗೇ L.S.ಗಿದಾನೆ ನೀವು, ನಿಮ್ಮಂಗಿ B.Sc., ರಾಘು ಎಲ್ರೂ ಇದ್ದಾರೆ, ಈ ವಯಸ್ಸಿಗೆ ಅವಳೊಂದು ಮನಸ್ಸು ಮಾಡಿದ್ರೆ ಸರಿ ಎಂದರು ರಾಧಮ್ಮ.

"ಅವರು ಈ ದಿನವೇ ಮೊದಲುಮಾಡಲಿ. ಒಂದೇ ಮನಸ್ಸಿಂದ ಓದಲಿ, ವಯಸ್ಸು ಎಷ್ಟಾದ್ರೇನು? ನಮ್ಮ ಜತೆ ಇಂಟರ್‌ಗೆ ಒಬ್ಬಾಕೆ ಆರು ಮಕ್ಕಳ ತಾಯಿ ಕೂರುತ್ತಿದ್ದಳು, ಅದರಲ್ಲೇನು ಅನುಮಾನ? ನಾಳೆಯೇ ೫ ರೂ. ಕಟ್ಟಿಸಿಬಿಡಿ ಪರೀಕ್ಷೆಗೆ, ಮೂರು ತಿಂಗಳು ಓದಲಿ, ಈ ಸಲದ ಪರೀಕ್ಷೆ ಆದ್ಹಾಗೆ ಆಗಲಿ ಸ್ವಲ್ಪ ಪ್ರಾಕ್ಟೀಸಾಗುತ್ತೆ ನನಗೇನೋ ಅವರಿಗೆ ಸುಲಭ ಅನ್ನಿಸುತ್ತೆ" ಎಂದು ಧೈರ್ಯ ಹೇಳಿದೆ,

"ನನ್ನಾಣೆಗೂ ನಿಮಗೆ ನಂಬಿಕೆ ಇದೆಯೇ? ಇಲ್ಲಿ ನೋಡಿ ಕಣ್ಣೊರೆಸೋಕೆ ಹೇಳಬೇಡಿ".

"ಖಂಡಿತವಾಗಿಯೂ" ಎಂದು ರಾಧಮ್ಮನವರ ಪ್ರಶ್ನೆಗೆ ಭರವಸೆ ಕೊಟ್ಟೆ.

ಸಾವಿತ್ರಮ್ಮನವರ ಬುದ್ಧಿ ಚುರುಕಾಗಿತ್ತು, ಪಾಠಗಳ ಪರಿಚಯ ಸಾಕಷ್ಟಿತ್ತು. ನನಗೆ ನಂಬಿಕೆಯಿತ್ತು, ರಾಧಮ್ಮನವರಿಗೆ ನಂಬಿಕೆ ಬಂತು. ಸಾವಿತ್ರಮ್ಮ ಕೋಡುಬಳೆ ಪೂರ್ತಿ ಮಾಡುವುದರಲ್ಲಿ ರಾಧಮ್ಮ ನಡುಮನೆ ಸಾರಿಸಿ ರಂಗೋಲಿ ಹಾಕಿ, ಬೆನಕವನ್ನಿಟ್ಟು ಪೂಜೆಗೆ ಅಣಿ ಮಾಡಿದರು, ಸಾವಿತ್ರಮ್ಮ ರಾಧಮ್ಮನವರ ಮಾತಿಗೆ ಅಧೈರ್ಯಪಟ್ಟರೂ. ಎಲ್ಲರೂ ಪ್ರೋತ್ಸಾಹಿಸುವುದನ್ನು ನೋಡಿ. "ಮಾಡಿಯೇ ಬಿಡೋಣ ಪ್ರಯತ್ನ " ಎಂದು ನಿರ್ಧರಿಸಿ, ಬೆನಕನನ್ನು ಪೂಜಿಸಿದರು.

"ಸಾವಿತ್ರೀ, ಪಾಸಾದ ಮೇಲೆ ಅಮ್ಮಯ್ಯಮ್ಮ ಭದ್ರಮ್ಮನೋರಿಗೆ ಸೇರು ಸಕ್ರಿ ಕೊಡು, ಈಗ ಒಂದು ಚಿಟಕಿ ಹಿಡಿಯಿರಿ" ಎಂದು ರಾಧಮ್ಮ ನಮಗೆ ಸಕ್ರಿ ಕೊಟ್ಟರು, "ಸೇರಲ್ಲ. ಪಂಚೇರು" ಎಂದು ಸಕ್ರೆ ಬಾಯಿಗಿಟ್ಟೆವು.

೩

ಸಾವಿತ್ರಮ್ಮನ ಓದು ತಡೆಯಿಲ್ಲದೆ ನಡೆಯಿತು. ಹತ್ತು ಹದಿನೈದು ದಿನದಲ್ಲಿ ಅವರಿಗೆ ಧೈರ್ಯವೂ ಬಂತು. ರಾಧಮ್ಮನವರೂ ಸಾಸಿವೆ ಡಬ್ಬದ ಎರಡು ರೂಪಾಯಿ, ಕಡಲೇಬೇಳೆ ಡಬ್ಬದ ಮೂರು ರೂಪಾಯಿ ಸೇರಿಸಿ ಪರೀಕ್ಷೆಗೆ ೫ ರೂಪಾಯಿ ಕಟ್ಟಿಸಿದ್ದೂ ಆಯ್ತು. ರಾಧಮ್ಮ ಸಾಯಂಕಾಲದ ಪುರಾಣ ಬಿಟ್ಟು ಎರಡು ದಿನ ಸತ್ಯ

ರಮೇಶನ್ನ ನೋಡಿಕೊಂಡರು. ಮೂರನೆ ದಿನ ಅವರ ಕಾಲು ನಿಲ್ಲಬೇಕೆ? ರಮೇಶನ ಸೊಂಟಕ್ಕೆಟ್ಟು ಸತ್ಯನ್ನ ಬಾಲ ಕಟ್ಟಿಕೊಂಡು ಪುರಾಣಕ್ಕೆ ಸವಾರಿ ಬೆಳೆಸಿದರು. ಅಂತೂ ಸಾವಿತ್ರಮ್ಮನ ಬದಿಗೆ ರಾಘು. ರೋಜಿಯ ಸಹಾಯ. ನಮ್ಮ ಪ್ರೋತ್ಸಾಹ ದೊರೆತು, ಆತಂಕವಿಲ್ಲದೆ ಮುಗಿಯಿತು, ಪರೀಕ್ಷೆಯೂ ಬಂತು. "ಎಲ್ಲಿಗೆ? ಎಲ್ಲಿಗೆ? ಎಂದು ಕೇಳುವ ನೆಂಟರಿಗೆ "ಗೀತಕ್ಕೆ, ಮಂಗಳಾರತಿಗೆ" ಎಂದು ನೆಪ ಹೇಳಿ ರಾಧಮ್ಮ ಸಾವಿತ್ರಮ್ಮನ್ನ ಪರೀಕ್ಷೆ ಹಾಲಿಗೆ ಕೊಂಡು ಹೋಗಿ. ಕರೆದುಕೊಂಡು ಬಂದು, ಪರೀಕ್ಷೆ ಪೂರ್ತಿ ಮಾಡಿಸಿದರು, ಪರೀಕ್ಷೆಯಲ್ಲಿ ಸುಮಾರಾಗಿ ಮಾಡಿದ್ದೇನೆಂಬ ಧೈರ್ಯ ಸಾವಿತ್ರಮ್ಮನವರಿಗಿತ್ತು. ನಂಬರ್ ಎಣಿಸಿ. I Class ಬರುತ್ತೆ ಎಂದು ನಾನು ಲೆಕ್ಕ ಹಾಕಿದೆ, ನನ್ನ ಲೆಕ್ಕದಂತೆಯೇ I Class ಬಂತು. ರಾಧಮ್ಮ "ಸಾವಿತ್ರೀ ಗೆದ್ದಳು, ರಂಗಣ್ಣ ಢುಂಕಿ" ಎಂದು ಎಲ್ಲರೂ ಹೇಳಿ ಸಂತೋಷ ಪಟ್ಟರು. ಸಾವಿತ್ರಮ್ಮನವರ ಮುಂದಿನ ಪ್ರಯತ್ನ "C.R.B." ಅರ್ಜಿ ಹಾಕಿದರು, ಎಲ್ಲಕ್ಕೂ ಮುಖ್ಯ ರಾಮಪ್ಪನವರು, ಸಾವಿತ್ರಮ್ಮ ಪಾಸಾದಕ್ಕೆ ಅವರು ಕೆಲಸಕ್ಕೆ ಅರ್ಜಿ ಹಾಕಿದ್ದಕ್ಕೆ ತಗ್ಗದೆ. ಒಂದೇ ಸಮನಾಗಿದ್ದುದು. "ಸಮಾಧಾನದಲ್ಲಿ ನನ್ನಳಿಯನ್ನ ಬಿಟ್ರೆ ರಿಲ್ಲ ಬಸವಣ್ಣನಿಗಿಂತ ತಾಳ್ಮೆ ಹೆಚ್ಚು" ಎಂದು ರಾಧಮ್ಮ ಶಹಭಾಶ್‌ಗಿರಿ ಕೊಟ್ಟರು, "ಅದೂ ಒಂದು ಅದೃಷ್ಟಾರೀ ಎಲ್ಲಾದ್ರೂ ಕೆಲಸಕ್ಕೆ ಹೋಗಬೇಡ ಎಂದಿದ್ರೆ ಪಾಸು ಮಾಡಿದ್ದೂ ದಂಡವಾಗ್ತಿತ್ತಲ್ಲಾ ರೀ, ತಡೆಹಾಕದಿರುವುದೂ ಒಂದು ದೊಡ್ಡತನ", ಎಂದು ಎಲ್ಲರೂ ಹೊಗಳಿದೆವು.

ಕೆಲಸ ಬರುವುದು ಸ್ವಲ್ಪ ನಿಧಾನವೇ ಆಯ್ತು. ಅನುಮಾನಿಸಿ ಹಿಡಿದರೂ, ಓದಿ ಪಾಸಾಗಿದ್ದು ಸಾವಿತ್ರಮ್ಮನಿಗೆ ಒಂದು ಧೈರ್ಯ ಕೊಟ್ಟಿತ್ತು. ಅಲ್ಲಿ ಇಲ್ಲಿ ಸುತ್ತಿ ಹೊಸದಾಗಿ ಪ್ರಾರಂಭವಾದ ಸೊಸೈಟಿಯೊಂದರಲ್ಲಿ ಕೆಲಸಕ್ಕೆ ಸೇರಿದರು ತಿಂಗಳಿಗೆ ೩೦ ರೂ ಸಂಬಳ. ಮಕ್ಕಳಿಗೆ ಗಂಜಿಯಾದರೂ ಹಾಕಬಲ್ಲೆನೆಂಬ ಧೈರ್ಯದಿಂದ ಈಗ ಆಕ್ಷೇಪಣೆ ಎತ್ತುವುದನ್ನು ಅಳುವುದನ್ನಾ ಸಾವಿತ್ರಮ್ಮ ಬಿಟ್ಟರು. ಹೊಸದಾಗಿ ಮನೆಗೆ ಬಂದ ಸೊಸೆಯ ಕೈ ಕಾಯುವುದು ಮಗಳಿಗೆ ತಪ್ಪಿತೆಂದು ರಾಧಮ್ಮ ದೇವರಿಗೆ ಲಕ್ಷದೀಪ ಹತ್ತಿಸಿದರು. ಸೇರು ಹತ್ತಿ ಬೀಜ ಹಸುವಿಗೆ ತಿನ್ನಿಸಿದರು, ಎಲ್ಲರಿಗೂ ಕೊಬರಿ ಮಿಠಾಯಿ ಹಂಚಿದರು. "ಸದ್ಯ ಅಮ್ಮಯ್ಯಮ್ಮ, ನಿಮ್ಮಿಂದ ಇಷ್ಟಾಯ್ತು. ದೇವರು ನಿಮಗೆ ಒಳ್ಳೇದು ಮಾಡಲಿ. ಭದ್ರಮ್ಮನೋರೆ ನಿಮಗೆ ಒಳ್ಳೆ ಸೊಸೆ ಬರಲಿ" ಎಂದು ಬಾಯ್ತುಂಬ ಹರಸಿದರು.

ಆರು ತಿಂಗಳಲ್ಲೇ ಸಾವಿತ್ರಮ್ಮನವರಿಗೆ ಹೆಸರುಘಟ್ಟದ ಪ್ರೈಮರಿ ಸ್ಕೂಲಿನಲ್ಲಿ ಕೆಲಸ ಸಿಕ್ಕಿತು. ಸಂಭ್ರಮದಿಂದ ಎಲ್ಲಾ ಸಿದ್ಧತೆ ಮಾಡಿಕೊಂಡು ಹೊರಟರು. ತಾತ ಒಂದು ವಾರ ಮಿಲ್‌ಗೆ ರಜಾ ತೆಗೆದುಕೊಂಡು ಹೊರಟರು. ಸಾವಿತ್ರಮ್ಮನವರ ಅಣ್ಣ ಪೋಲೀಸ್‌ನಲ್ಲಿ ಕೆಲಸ-ಬಸ್ ಪಾಸ್ ತಂದುಕೊಟ್ಟರು. ಎರಡು ವಾಯಿಲ್ ಸೀರೆ ತಂದು ಕೊಟ್ಟರು ರಾಘು" ಸಾವಿತ್ರೀ. ಈ ಕಾಗದ, ಪೆನ್ಸಿಲ್, ನಿಬ್, ಶಾಯಿಪಟ್ಟಣ ತಗೋ. ಈ ಬಾಲಭೋದೆ ಗಟ್ಟಿ ಮಾಡಿಕೋ" ಎಂದು ತಂದು ಕೊಟ್ಟಾಗ "ಮಹರಾಯ. ನಿನ್ನ ಮಾತಿಗಾಗಿ ಈ ದಾರಿ ಸಿಕ್ಕಿತು." ಎಂದು ಸಾವಿತ್ರಮ್ಮ ನಕ್ಕರು. ರೋಜಿ "ಸಾವಿತ್ರೀ ಹೆಸರುಘಟ್ಟದಲ್ಲಿ ಬರೀ ಮೇಷ್ಟ್ರುಳಂತೆ, ನೀನೇ ಮೊದಲ ಮೇಡಂ ಅಂತೆ ಹಾಡು ನೀನೇ ಹೇಳಿಕೊಡಬೇಕಂತೆ ನಮ್ಮ ಕ್ಲಾಸಿಗೆ ಅಲ್ಲಿಂದ ಒಂದು ಹುಡುಗಿ ದಿನಾ ಬರುತ್ತೆ ಅದು ಹೇಳಿತು" ಎಂದಳು ರಂಗಣ್ಣ "ಈ ಮೂಟೆ ಬಸ್ಸಿಗೆ ಸ್ಟ್ಯಾಸ್ತಿಕ್‌ಗೆ ತಂದು ಕೊಡು ಕೂಲಿ-ಸಂಬಳ ಬಂದಾಗ ಕೊಡು" ಎಂದ. ಸುಮಿ "ಈ ಭಾನುವಾರವೇ ನಾನು ಅಮ್ಮ ಹಾಜರ್. ಅಡುಗೆ ಮಾಡಿರು" ಎಂದು ಜ್ಞಾಪಿಸಿದಳು. ನಾವು, ಸಾವಿತ್ರಮ್ಮ ಆ ಹೆಸರುಘಟ್ಟದಲ್ಲಿ ಹಣ್ಣು ಬಹಳ. ಘಾರಂಗಿಂದ ಬರುವಾಗೆಲ್ಲ ಹಣ್ಣು ಕೊಂಡು ತನ್ನಿ "ಎಂದು ಹೇಳಿದೆವು" ಈ ಸಲ ರಜಾಕ್ಕೆ ಬಂದಾಗ, ನಿಮ್ಮ ಸ್ವೆಟರ್ ಹಾಕೋಣ. ಫುಲ್ ಕೋಟೇ ಹಾಕೋಣ, ಉಲ್ಲನ್ ತರಿಸಿಡಿ" ಎಂದು ಸಾವಿತ್ರಮ್ಮ ಎಚ್ಚರಿಸಿದರು,

ಗಾಡಿಗೆ ಹೊರಡುವಾಗ "ಸದ್ಯ ಸೊಸೈಟಿ ಕೆಲಸ ತಪ್ಪಿತು, ನಿಮ್ಮೆದುರಿಗೆ ಇಷ್ಟು ದಿನ ಬಾಯಿ ಬಿಡಲಿಲ್ಲ ಆತ ಒಳ್ಳೆಯವನಾದರೂ ಬಲು ಸಿಡುಕು. ಯಾವಾಗಲೂ ಬೈಯುತ್ತಿದ್ದ ರೀ ಕೆಲಸದ ಹುಡುಗ ಆತನ ಸಿಡುಕಿಗೆ ಓಡಿ ಹೋದಾಗ. ಕೊನೆ ಕೊನೆ ಎಷ್ಟೋ ದಿನ ಸೊಸೈಟಿಯ ಕಸ ಕೂಡ ನಾನೇ ಗುಡಿಸಿಕೊಂಡೇ ರೀ. ಸದ್ಯ ಸಾವುಕಾರಿ ತಾಪೇದಾರಿ ತಪ್ಪಿತು. ಇನ್ನು ಸರ್ಕಾರದ ಕೆಲಸ ದೇವರು ನಡೆಸಬೇಕು ಮರೆಯಬೇಡ್ರಿ ಬರ್‍ತೇನೆ" ಎಂದರು,

"ಹಳ್ಳಿ. ಅವರ ಮನಸ್ಸು ತಿಳಿದು ಕೆಲಸ ಮಾಡಿ, ಒರಟಾಟ ಸರಿ ಹೋಗೋಲ್ಲ ಸರಳವಾಗಿ ಬೆರೆತರೆ ಹಳ್ಳಿಯವರಷ್ಟು ಒಳ್ಳೆಯವರಿಲ್ಲ. ಜಂಭವಾಗಿ ದೂರ ನಿಂತರೆ ಅವರಷ್ಟು ಒರಟಿಲ್ಲ, ಹೋಗಿಬನ್ನಿ, ದೇವರು ಒಳ್ಳೆಯದು ಮಾಡಲಿ" ಎಂದು ಬೀಳ್ಕೊಟ್ಟೆವು.

"ಸಾವಿತ್ರಿ ಮನೆ ಬಿಟ್ಟು ಹೊರಗೆ ಹೋಗಿದ್ದೇ ಕಾಣೆ, ಹನ್ನೆರಡು ವರ್ಷ ಆಯ್ತು" ಎಂದು ರಾಧಮ್ಮ ಅತ್ತರು. ಆ ದಿನ ಪುರಾಣಕ್ಕೆ ಹೋಗದೆ ಮನೆ ಬಾಗಿಲಲ್ಲೇ ಕುಳಿತರು

೪

ಸಾವಿತ್ರಮ್ಮ ಹೆಸರುಘಟ್ಟ ಸೇರಿ ವರ್ಷವಾಯ್ತು. ಮಕ್ಕಳೂ ಅಲ್ಲೇ ಇವೆ. ಗಂಡನೂ ಈಗ ಅಲ್ಲೇ ಹೇಗೋ ಕಷ್ಟ ಸುಖ ಹಂಚಿಕೊಂಡು. ಗಂಜಿ ಕುಡಿದು ತೃಪ್ತವಾಗಿದ್ದಾರೆ. ಹೆಣ್ಣು ಮಕ್ಕಳದೇ ಸ್ಕೂಲು ಈಗ ಬೇರೆಯಾಗಿದೆ ಸಾವಿತ್ರಮ್ಮ ಈಗ ಹೆಡ್ ಮೇಡಂ ಕೈ ಕೆಳಗೆ ಈಗ ಇಬ್ಬರು ಮೇಡಂಗಳು. ಹಾಡು, ಹೊಲಿಗೆ ಸಾವಿತ್ರಮ್ಮನವರದು. "ಕಂಡು ಕಂಡು ನೀಯೆನ್ನ ಕೈ ಬಿಡುವರೇ ಕೃಷ್ಣ" ಹಾಡುವಾಗ ಈಗ ಇತರರ ಹಂಗಿಲ್ಲದೆ. ಮುದುಕ ತಂದೆ ತಾಯಿಗಳಿಗೆ ಭಾರವಾಗದೆ, ತನ್ನ ಅನ್ನ ನಾನು ಊಟ ಮಾಡಲು ತನಗೆ ಚೈತನ್ಯ ಕೊಟ್ಟದ್ದಕ್ಕೆ ದೇವರಿಗೆ ನಮಸ್ಕಾರ ಮಾಡುತ್ತಾರೆ. ಗಂಡನಿಗೆ ಇನ್ನೂ ಕೆಲಸವಿಲ್ಲದಿದ್ದರೂ ಗೊಣಗಿ. ಆಕ್ಷೇಪಿಸಿ. ರಾದ್ಧಾಂತ ಮಾಡಿಕೊಳ್ಳದೆ ಸಮಾದಾನದಿಂದ ಸಂಸಾರ ಸಾಗಿಸುತ್ತಿದ್ದಾರೆ. ರಾಧಮ್ಮನವರಿಗೂ ನಮಗೂ ಆಗಲೆ ಹತ್ತು ಸಲ ಹೆಸರುಘಟ್ಟಕ್ಕೆ ಬರಲು ಆಹ್ವಾನ ಮೇಲಿಂದ ಮೇಲೆ ಬಂದಿದೆ. ಆದರೆ ಇನ್ನೂ ಹೋಗುವುದರಲ್ಲೇ ಇದ್ದೇವೆ. ಈ ಸಲ ಕ್ರಿಸ್‌ಮಸ್‌ನಲ್ಲಿ ಖಂಡಿತ ಹೋಗೋಣ ಎಂದು ಮಾತನಾಡಿಕೊಳ್ಳುತ್ತಿರುವಾಗಲೇ ರಾತ್ರಿ ಸಾವಿತ್ರಮ್ಮ ಇಲ್ಲಿಗೆ ಬಂದಿದ್ದಾರೆ,

"ಇದೇನ್ರೀ ನಾವೆಲ್ಲಿ ಬರ್‍ತೀವೋ ಅಂತ, ನೀವೇ ಬಂದು ಬಿಟ್ರಿ. ಬಲು ಬುದ್ಧಿ" ಎಂದು ಹಾಸ್ಯ ಮಾಡಿದೆವು.

"ಅಲ್ರೀ ನಿಮ್ಮ ಸ್ವೆಟರ್ ಹಾಕುವದೆಂದು ಅಲ್ವಾ ನಮ್ಮ ಪ್ಲಾನ್? ಅದಕ್ಕೇ ಬೇಗ ಬಂದೆ, ಛಳಿ ಹೆಚ್ಚಾಗೀತು ಎಂದು ಎಂದರು ಸಾವಿತ್ರಮ್ಮ,

"ಹೆಸರುಘಟ್ಟದ ಹಣ್ಣೇಲ್ಲೇ ಸಾವಿತ್ರಿ? ಅಮ್ಮಯ್ಯಮ್ಮ ಮರ್‍ಯಾದೆ ಕಳೆದಾರು" ಎಂದರು ರಾಧಮ್ಮ.

"ಹಣ್ಣೇ ಆಗಿಲ್ಲ ರೀ" ಎಂದರು ಸಾವಿತ್ರಮ್ಮ,

"ರೀ ಸುಳ್ಳೇಳ್ತೀರಾ" ಎಂದೆ ನಾನು,

"ಖಂಡಿತಾ ಇಲ್ಲ. ಸಪೋಟಾ ಹಣ್ಣಾಗಿಲ್ಲ. ಫರಂಗಿ ಅಪರೂಪದ್ದಲ್ಲ. ಸೀಬೆ ಹುಳು ಹಿಡಿದಿದೆ, ನಾನು ತರಲಿಲ್ಲ ಇಗೋ ಹಣ್ಣಿಲ್ಲದಿದ್ದರೂ ಎಲೆ ತಂದಿದ್ದೇನೆ. ತಗೋಳ್ಳಿ" ಎಂದು ಒಂದು ಕಟ್ಟು ವೀಳ್ಯದೆಲೆ ತೆಗೆದಿಟ್ಟರು.

"ಇನ್ನೂ ಕೊಂಚ ಬೆಳ್ಳಗಿರೋ ಎಲೆ ಸಿಗೋಲ್ಲವೇನೇ ನಿಮ್ಮೂರಲ್ಲಿ ಸಾವಿತ್ರೀ? ನಾವೇನು ಹಳ್ಳಿಯವರು ಅಂದು ಕೊಂಡೆಯಾ?" ಎಂದು ರಾಧಮ್ಮ ಟೀಕಿಸಿದರು.

"ನೀವು ಸಿಟಿಯವರು ನಾನೇನು ಹಳ್ಳಿಯವಳೇ, ನನ್ನ ಸಂಬಳ ಬೆಂಗಳೂರು ವಾಸಕ್ಕೆ ಒಂದು ಮೂಲೆಗೆ. ಇನ್ನು ಹಳ್ಳಿಯೇ ನನ್ನ ವಾಸ" ಎಂದು ಸಾವಿತ್ರಮ್ಮ ನಿರ್ಧಾರವಾಗಿ ಹೇಳಿದರು.

"ಸದ್ಯ ನಿನ್ನ ಗಂಜಿ ನೀನೆಲ್ಲಾದರೂ ಕುಡಿ, ಇದ್ದ ಕಡೆ ದೇವರು ನೆಟ್ಟಗಿಡಲಿ" ಎಂದು ರಾಧಮ್ಮ ಹಾರೈಸಿದರು.

"ಸದ್ಯ ಸಾವಿತ್ರಿ ಯೋಚನೆ ನನಗಿನ್ನು ತಪ್ಪಿತು, ನಿಮ್ಮ ಮಾತು ಕೇಳಿದ್ದು ಸಾರ್ಥಕವಾಯ್ತು, ಮುದುಕಿಯಾದ ಮೇಲೆ ನಾಳೆ ಗಂಡ್ಮಕ್ಕಳು ನನಗೆ ಹಾಕದಿದ್ದರೆ ಇವಳಾದರೂ ಒಂದು ಗಂಜಿ ನೀರು ಹಾಕ್ತಾಳೆ. ಇವಳದೇ ಒಂದು ಮನಸ್ಸು" ಎಂದು ತಾತ ಸಮಾಧಾನಪಟ್ಟುಕೊಂಡರು.

"ನಿಮ್ಮೂರಿಗೆ ನನ್ನ ಕರೆದೆಯೇನೇ ಸಾವಿತ್ರಿ." ಎಂದು ಸಾವಿತ್ರಮ್ಮನವರ ಅಣ್ಣ ಟೀಕಿಸಿದರು ನಗುತ್ತಾ.

"ಹೋದ ಪ್ರಾಣ ಬರಿಸಿದಳು ಗಂಡಂಗೆ ಆ ಸಾವಿತ್ರಿ. ಈ ಸಾವಿತ್ರಿ ಹಸಿದ ಹೊಟ್ಟೆಗೆ ಅನ್ನ ಕೊಟ್ಟಳು ಗಂಡ ಮಕ್ಕಳಿಗೆ" ಎಂದರು ಭದ್ರಮ್ಮನವರು.

ಸಂವಾದ

ಆಸ್ತಿ ಹಕ್ಕಿನಲ್ಲಿ ಸಮಾನತೆ

ಕರ್ನಾಟಕ ಸರ್ಕಾರ 1956ರ ಹಿಂದೂ ಉತ್ತರಾಧಿಕಾರಿ ಕಾಯ್ದೆಗೆ ತಿದ್ದುಪಡಿ ತರುವ ದೃಷ್ಟಿಯಿಂದ 1990ರ ಹಿಂದೂ ಉತ್ತರಾಧಿಕಾರಿ (ಕರ್ನಾಟಕ ತಿದ್ದುಪಡಿ) ಕಾಯ್ದೆಯ ಕಂಡು ಮಸೂದೆಯನ್ನು ತಯಾರಿಸಿ ಶಾಸನ ಸಭೆಯಲ್ಲಿ ಚರ್ಚಿಸಿತು. ಹಾಗೆಯೇ ಈ ವಿಷಯವನ್ನು ಕುರಿತಂತೆ ಸಾರ್ವಜನಿಕವಾಗಿಯೂ ಸಾಕಷ್ಟು ಚರ್ಚೆ ನಡೆಸಿದೆ. "ಪಿತ್ರಾರ್ಜಿತ ಆಸ್ತಿಯಲ್ಲಿಯೂ ಹೆಣ್ಣು ಮಕ್ಕಳಿಗೆ ಗಂಡು ಮಕ್ಕಳಿಗೆ ಸರಿ ಸಮವಾಗಿ ಹಕ್ಕು ನೀಡಬೇಕೆಂದು ಒತ್ತಿ ಹೇಳುವ ಈ ಕಾನೂನಿನ ಜಾರಿಯ ಬಗ್ಗೆ ಸಾಕಷ್ಟು ಪರ ವಿರೋಧದ ಅಭಿಪ್ರಾಯಗಳು ಸಾರ್ವಜನಿಕರಲ್ಲಿ ಮೂಡಿ ಬರುತ್ತಿವೆ. "ಅಚಲ" ಓದುಗರು ಇಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಸಮಾನತೆಯ ಇಂದಿನ ಯುಗದಲ್ಲಿ ಹೆಣ್ಣು ಎಲ್ಲ ಕ್ಷೇತ್ರಗಳಲ್ಲೂ ಸಮಾನತೆಯನ್ನು ಕೇಳುವಾಗ ಪಿತ್ರಾರ್ಜಿತ ಆಸ್ತಿಯ ಹಕ್ಕಿನಲ್ಲೂ ಸಮಾನ ಅವಕಾಶ ಕೊಡುವುದರಲ್ಲಿ ಹಿಂದೆ ಮುಂದೆ ನೋಡುವುದು ತುಂಬಾ ತಪ್ಪು. ಪಿತ್ರಾರ್ಜಿತ ಆಸ್ತಿ ಸಿಕ್ಕಿಯೇ ಸಿಕ್ಕುತ್ತದೆ ಎಂಬುದು ಗ್ಯಾರಂಟಿಯಾದಾಗ ಹೆಣ್ಣು ಹೆಚ್ಚು ಸ್ವತಂತ್ರವಾಗಿ ಜೀವನ ಸಾಗಿಸುವ ನಿರ್ಧಾರ ತೆಗೆದುಕೊಳ್ಳಬಹುದು. ಇಷ್ಟವಿಲ್ಲದಿದ್ದರೂ ಮದುವೆಯ ನೊಗಕ್ಕೆ ಕೇವಲ ಆರ್ಥಿಕ ಅವಲಂಬನೆಯ ಕಾರಣವೊಂದಕ್ಕಾಗಿಯೇ ತಲೆ ಕೊಡ ಬೇಕಾಗಿಲ್ಲ. ಸಮಾಜವೂ ಕೂಡ ಆಸ್ತಿ ಹೊಂದಿರುವ ಹೆಣ್ಣನ್ನು ನೋಡುವ ದೃಷ್ಟಿ ಬದಲಾಗಿ ಮದುವೆ ಮಾರುಕಟ್ಟೆಯಲ್ಲಿ ಅವಳಿಗೆ ಹೆಚ್ಚು ಬೆಲೆ ಸಿಕ್ಕಿ ಅವಳ ಸ್ಥಾನಮಾನ ಹೆಚ್ಚಬಹುದು,

☐ ಟಿ. ಗಿರಿಜ

ನಮ್ಮದು ಸಂಪ್ರದಾಯದಿಂದ ಜಡವಾದ ಸಮಾಜ. ಎಷ್ಟೇ ಕಾನೂನುಗಳು ಬಂದರೂ ಸಂಪ್ರದಾಯದ ಆಚರಣೆಗಳು ಅಳಿಸಿ ಹೋಗುವುದಿಲ್ಲ. ಹೆಣ್ಣು ಮಕ್ಕಳಿಗೆ ಓದಿಸಿ ಮದುವೆಯನ್ನು ಸಾಂಗೋಪಾಂಗವಾಗಿ ಮಾಡಿ ಆಸ್ತಿಯಲ್ಲೂ ಪಾಲು ಕೊಟ್ಟು ಕಳಿಸಬೇಕೆನ್ನುವುದು ದುರಾಸೆಯ ಬೇಡಿಕೆಯಾಗುತ್ತದೆ. ಸರಳವಾಗಿ ಮದುವೆಯಾಗುತ್ತೇವೆಂದು ಹೆಣ್ಣು ಮಕ್ಕಳು ಹೇಳಿದರೂ ಅಂತಹುದು ಸಂಭವಿಸುವುದು ಬೆರಳೆಣಿಕೆಯ ಜನಗಳಲ್ಲಿ ಮಾತ್ರ ಅಪವಾದವಾದ ಸ್ಥಿತಿಯನ್ನು ಸಾಮಾನ್ಯ ಸ್ಥಿತಿಯಂತೆ ಕಲ್ಪಿಸಿಕೊಳ್ಳುವುದು ತಪ್ಪಾಗುತ್ತದೆ ಹಾಗೆಂದು ಪಿತ್ರಾರ್ಜಿತ ಆಸ್ತಿಯಲ್ಲಿ, ಹೆಣ್ಣು ಮಕ್ಕಳಿಗೆ ಸಮಾನ ಹಕ್ಕು ಕೊಡುವುದಕ್ಕೆ ನನ್ನ ವಿರೋಧವಿದೆಯೆಂದು ಅಲ್ಲ. ವಿವಾಹಿತ ಹೆಣ್ಣು ಮಕ್ಕಳಿಗೆ, ಮುಂದೆ ವಿವಾಹವಾಗುವ ಹೆಣ್ಣು ಮಕ್ಕಳಿಗೆ ಇದರ ಸೌಕರ್ಯವನ್ನು ಕೊಡದೆ ವಿಧವೆಯರು ಹಾಗೂ ಅವಿವಾಹಿತ ಹೆಣ್ಣು ಮಕ್ಕಳಿಗೆ ಮಾತ್ರಾ ಈ ಕಾನೂನಿನ ವ್ಯಾಪ್ತಿಯನ್ನು ಕುಗ್ಗಿಸಬೇಕು.

☐ ಎಲ್. ಸುಬ್ರಹ್ಮಣ್ಯ

"ಪಿತ್ರಾರ್ಜಿತ ಆಸ್ತಿ"ಯೆಂದರೆ ಹಣ, ಕಟ್ಟಡಗಳು ಭೂಮಿ, ಎಸ್ಟೇಟ್‌ಗಳು, ಒಡವೆಗಳು ಎಲ್ಲಾ ಸೇರುತ್ತವೆ. ಹಣ ಕಟ್ಟಡಗಳನ್ನು ಹೆಣ್ಣು ಮಕ್ಕಳು ಪಿತ್ರಾರ್ಜಿತವಾಗಿ ಪಡೆದರೂ ಅದನ್ನು ಉಪಯೋಗಿಸಿಕೊಳ್ಳಬಹುದು ಆದರೆ ಭೂಮಿ. ಹೊಲ ಗದ್ದೆ. ಎಸ್ಟೇಟ್‌ಗಳನ್ನು ಹೆಣ್ಣು

ಮಕ್ಕಳು ಪಡೆದರೆ ಅದನ್ನು ಸರಿಯಾಗಿ ಪಾಳು ಬೀಳು ಬೀಳುತ್ತಾರೆಂದು ನೋಡಿಕೊಳ್ಳುವುದು ಹೇಗೆ? ಮತ್ತೊಂದು ಮುಖ್ಯ ಪ್ರಶ್ನೆ "ಪಿತ್ರಾರ್ಜಿತ ಆಸ್ತಿ"ಎಂದರೆ ಕೆಲವರಿಗೆ ಸಾಲದ ಹೊರೆಯೇ ಆಗಿರುತ್ತದೆ, ಇದನ್ನು ಹೆಣ್ಣುಮಕ್ಕಳು ಹೊರಲು ಸಿದ್ಧರಿರುವರೇ? ಸುಮ್ಮನೆ ಪಿತ್ರಾರ್ಜಿತ ಆಸ್ತಿಯಲ್ಲಿ ಸಮಾನ ಹಕ್ಕು ಎನ್ನುವುದು ಕುರುಡು ನ್ಯಾಯವಾಗುತ್ತದೆ,

☐ ರಾಜೀವಲೋಚನ

ಹೆಣ್ಣು ಮಕ್ಕಳು ಬಯಸಲಿ, ಬಯಸದಿರಲಿ ತಂದೆ ತಾಯಿಗಳು ಸಾಲವೊ ಸೋಲವೊ ಹೇಗಾದರೂ ಮಾಡಿ ಮದುವೆಯನ್ನಂತೂ ಮಾಡುತ್ತಾರೆ. ನಂತರವೂ ಹೆಣ್ಣು ಮಕ್ಕಳಿಗಾಗಿ ತಂದೆ. ತಾಯಿ, ಅಣ್ಣಂದಿರು ಒದ್ದಾಡುವುದು ತಪ್ಪುವುದಿಲ್ಲ. ಹೀಗಿರುವಾಗ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕು ಕೇಳಿ ಅಣ್ಣ - ತಂಗಿಯರ ಪ್ರೀತಿಯ ಬಾಂಧವ್ಯ ಒಡೆಯುವಂತೆ ಮಾಡಿಕೊಳ್ಳುವುದು ಜಾಣತನವಲ್ಲ. ವಂಶೋದ್ಧಾರಕನಾದ ಮಗ, ಇಳಿ ಹೊತ್ತಿನಲ್ಲಿ ತಮ್ಮನ್ನು ನೋಡಿಕೊಳ್ಳುವ ಮಗನೊಂದಿಗೆ ಆಸ್ತಿ ಹಕ್ಕಿಗಾಗಿ ಹೆಣ್ಣು ಮಕ್ಕಳು ಕುಸ್ತಿಗೆ ಇಳಿದರೆ ಅಪ್ಪ ಅಮ್ಮಂದಿರ ಪ್ರೀತಿಯೂ ಸೊನ್ನೆಯಾಗುವುದಿಲ್ಲವೇ?

☐ ಸರೋಜ ನರೇಂದ್ರ

ಆಸ್ತಿ ಹಕ್ಕಿನ ತಿದ್ದುಪಡಿಯನ್ನು ಸೂಚಿಸಿರುವವರು ವರದಕ್ಷಿಣೆಯ ಮಹಾ ಪಿಡುಗನ್ನು ತೊಡೆದುಹಾಕಬಹುದೆಂಬ ಮಹತ್ವಾಕಾಂಕ್ಷೆಯನ್ನಿಟ್ಟುಕೊಂಡಿರುವುದು ಸ್ವಾಗತಾರ್ಹವೇ ಸರಿ. ಆದರೆ ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣಿಗೆ ಸಮಾನವಾದ ಹಕ್ಕು ಬೇಕೆಂಬ ಬೇಡಿಕೆ ಹಲವಾರು ಮೂಲಭೂತ ಪ್ರಶ್ನೆಗಳನ್ನು ಎತ್ತುತ್ತದೆ. ನಮ್ಮ ಸಮಾಜದಲ್ಲಿನ ಕುಟುಂಬದ ಸ್ವರೂಪ, ವಿವಾಹ ಸಂಸ್ಥೆಯ ಬಗೆಗಿರುವ ಪರಿಕಲ್ಪನೆಗಳು ಎಲ್ಲವೂ ಕ್ರಾಂತಿಕಾರಕ ಬದಲಾವಣೆಗೆ ಒಳಗಾಗದ ಹೊರತು ಕೇವಲ ಕಾನೂನಿನಿಂದ ಹೆಣ್ಣಿಗೆ ಸಾಮಾಜಿಕ ನ್ಯಾಯ ದೊರೆಯುವುದು ಕಷ್ಟದ ಮಾತೇ ಸರಿ. ಮಗಳಿಗೆ ವಿದ್ಯೆಯನ್ನು ಕೊಡಿಸಿಯೂ ಅದ್ದೂರಿಯಿಂದ ವಿವಾಹ ಮಾಡಿಕೊಡಬೇಕೆಂಬ ಹಾಗೂ ವರದಕ್ಷಿಣೆಯನ್ನು ಕೊಡಬೇಕೆಂಬ ಪದ್ಧತಿಯನ್ನು ಒಪ್ಪಿಕೊಂಡ ಮಗಳು ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕು ಕೇಳಲು ನೈತಿಕವಾದ ಧ್ವನಿಯನ್ನು ಕಳೆದುಕೊಳ್ಳುತ್ತಾಳೆ. ಈ ಎಲ್ಲ ಚರ್ಚೆಗಳು ಆಸ್ತಿಯ ಹಕ್ಕು ಮತ್ತು ವರದಕ್ಷಿಣೆಯನ್ನು ಪರ್ಯಾಯವೆಂಬಂತೆ ಸೂಚಿಸಿದರೂ ಅವೆರಡೂ ಒಂದೇ ಅಂತೂ ಅಲ್ಲ. ವರದಕ್ಷಿಣೆಯ ವ್ಯವಹಾರದಿಂದ ಹೆಣ್ಣಿನ ವ್ಯಕ್ತಿತ್ವಕ್ಕೆ ಕುಂದುಂಟಾಗುತ್ತದೆಯಷ್ಟೇ ಅಲ್ಲ ಗಂಡಿನ ವ್ಯಕ್ತಿತ್ವಕ್ಕೂ ಕಳಂಕ ತರುತ್ತದೆ. ಆದರೆ ಆಸ್ತಿಯ ಹಕ್ಕನ್ನು ಪಡೆಯುವುದರಿಂದ ಹೆಣ್ಣಿನ ವಿಶ್ವಾಸ ಹೆಚ್ಚುತ್ತದೆ.

☐ ಆಶಾ

ಮಹಿಳಾ ಸಾಕ್ಷರತೆಗೆ ಹೊಸ ಕಾಯಕಲ್ಪ

ಧಾರ್ಮಿಕ ಮೂಲಭೂತವಾದ ಮತ್ತು ಆಧುನಿಕ ವಿಜ್ಞಾನದ ದುರುಪಯೋಗ ಇವೆರಡೂ ಇಂದು ಮಹಿಳೆಯರಿಗೆ ಒದಗಿ ಬಂದಿರುವ ಆಘಾತಗಳು. ಇಂದು ಮೂಲಭೂತವಾದಿಗಳ "ಸಂಹಾರದ ಪಟ್ಟಿ" (Hit List)ಯಲ್ಲಿ ಮೊಟ್ಟ ಮೊದಲು ಇರುವವರು ಮಹಿಳೆಯರೇ, ನೂರಾರು ವರ್ಷಗಳಿಂದಲೂ ಇರುವ ಹೆಣ್ಣಿನ ಮಾದರಿಯ ಮೂರ್ತಿಯನ್ನು ಮತ್ತೆ ಮತ್ತೆ ರೂಪಿಸುವುದು ಈ ಹೆಣ್ಣಿನ ಮಣ್ಣಿಂದಲೇ, ಆಧುನಿಕ ವಿಜ್ಞಾನ ಬೇರೊಂದು ರೀತಿಯಲ್ಲಿ ಈ ಕೆಲಸವನ್ನೇ ಮಾಡುತ್ತಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ಸಾಧನೆಗಳು ಸ್ತ್ರೀ ಭ್ರೂಣವನ್ನು ಗುರುತಿಸಿ ಇವುಗಳ ನಿರ್ವಂಶಕ್ಕೆ ಹಾತೊರೆಯುತ್ತಿವೆ.

ಈ ಎರಡೂ ಆಘಾತವನ್ನು ಎದುರಿಸಲು ಮಹಿಳಾ ಸಾಕ್ಷರತೆಯು ತುರ್ತು ಅಗತ್ಯವಾಗಿ, ಗಮನಹರಿಸಲೇಬೇಕಾದ ಬೇಡಿಕೆಗಳಲ್ಲಿ ಮೊದಲನೆಯ ಸ್ಥಾನ ಆಕ್ರಮಿಸಬೇಕಾಗಿದೆ. "ತುರ್ತು ಚಿಕಿತ್ಸೆ"ಯ ಅಗತ್ಯವಿದೆಯೆಂದರೂ ಅಡ್ಡಿಯಿಲ್ಲ.

☐ ಅಬ್ದುಲ್ ಹಕ್ ಮತ್ತು ಟಿ. ಆರ್. ನಾರಾಯಣನ್
(ಹಿಂದೂ 19-3-1991)

ಯೋಜನಾ ನೀತಿ ಏಕೆ ಈ ನಿರ್ಲಕ್ಷ್ಯ ?

ಸ್ತ್ರೀ ಪುರುಷರ ಪ್ರಮಾಣದಲ್ಲಿ. ಸ್ತ್ರೀಯರಿಗೆ ಸಂಬಂಧಿಸಿದಂತೆ ಇಳಿತ ಕಂಡು ಬಂದು ನೂರು ವರ್ಷಗಳೇ ಸಂಧಿದ್ದರೂ 1981ರ ಜನಗಣತಿಯು ರಾಷ್ಟ್ರೀಯ ನೆಲೆಯಲ್ಲಿ ಕೊಂಚವಂಟ್ಟಿಗಾದರೂ ಮೊದಲ ಬಾರಿಗೆ ಸಮಾಧಾನಕರ ಸುಧಾರಣೆಯನ್ನು ತಂದಿತ್ತು. ಆದರೆ ಇತ್ತೀಚೆಗೆ ಬಂದ 1991ರ ಜನಗಣತಿಯು ಆಶಾದಾಯಕವಾದ ಈ ಭರವಸೆಯನ್ನು ನುಚ್ಚು ನೂರು ಮಾಡಿತು. 1981ರಲ್ಲಿ ಶೇಕಡ 3ರಷ್ಟು ಏರಿದ್ದ ಮಹಿಳೆಯರ ಪ್ರಮಾಣ ಮಹಿಳೆಯರ ಸ್ಥಾನ ಮಾನ ಕೊಂಚವಾದರೂ ಹೆಚ್ಚಿದೆಯೆಂಬ ಆಸೆಯನ್ನು ಹುಟ್ಟಿಸಿತ್ತು,

ಮಹಿಳೆಯರ ಸ್ಥಾನ ಮಾನವನ್ನು ಅಧ್ಯಯನ ಮಾಡಲೆಂದು ನೇಮಿಸಲಾದ ಸಮಿತಿಯು ಮಹಿಳೆಯರ ಸಂಖ್ಯೆಯು ಇಳಿಮುಖಕ್ಕೆ ಕೆಲವೊಂದು ಕಾರಣಗಳನ್ನು ಗುರುತಿಸಿದೆ. ಆರ್ಥಿಕ ಕ್ಷೇತ್ರಗಳಲ್ಲಿ, ಕುಟುಂಬದಲ್ಲಿ, ರಾಜಕೀಯ ಪ್ರಕ್ರಿಯೆಯಲ್ಲಿ, ಮಹಿಳೆಯರ ಪಾತ್ರವನ್ನು ನಿರ್ಲಕ್ಷಿಸುವುದರಿಂದ ಮಹಿಳೆಯರಲ್ಲಿ ಬಡತನ, ಹಸಿವು ಮತ್ತು ಸಾವಿನ ಸಂಖ್ಯೆಗಳು ಎಲ್ಲ ಜಾತಿ ಮತಗಳ ಜನರಲ್ಲೂ ಹೆಚ್ಚಿದೆ.

ಕಳೆದ ಹದಿನೈದು ವರ್ಷಗಳಿಂದ ಮಹಿಳೆಯರ ಸಮಸ್ಯೆಗಳ ವಿರುದ್ಧ ಹೋರಾಡುತ್ತಿರುವ ಮಹಿಳಾ ಚಳುವಳಿಯು ಮಹಿಳಾ ಶೋಷಣೆಗೆ ಪರಿಹಾರ ನೀಡಬಲ್ಲ ರಾಷ್ಟ್ರೀಯ ನೀತಿಯಲ್ಲಿ ಮಹತ್ತರ ಬದಲಾವಣೆಗಳನ್ನು ತರುವಲ್ಲಿ ಶ್ರಮಿಸಿವೆ ಹೆಣ್ಣಿನ ಸ್ಥಿತಿ ಗತಿಯನ್ನು ಉತ್ತಮಗೊಳಿಸುವ ಭದ್ರತೆಗೆ ಸಂಬಂಧಪಟ್ಟಂತೆ ಕಾನೂನಿನಲ್ಲಿ ಚಿಕ್ಕ ಪುಟ್ಟ ಬದಲಾವಣೆಗಳನ್ನು ತರುವಂತೆ ಸರ್ಕಾರವನ್ನು ಒತ್ತಾಯಿಸುವಲ್ಲಿ ಮಹಿಳಾ ಚಳುವಳಿಯು ಯಶಸ್ವಿಯಾಗಿದೆ. ಆದರೆ ಸರ್ಕಾರವಾದರೋ ಸಮಾಜದಲ್ಲಿ ಮಹತ್ತರ ಸಾಮಾಜಿಕ, ರಾಜಕೀಯ, ಆರ್ಥಿಕ ಪ್ರಗತಿಯನ್ನುಂಟು ಮಾಡುವ ಬೃಹತ್ ಕಾರ್ಯಕ್ರಮವನ್ನು ಯೋಜಿಸದೆ ಸೋತಿದೆ.

ಸರ್ಕಾರ ಅವಶ್ಯವಾಗಿ ಗಮನಿಸಬೇಕಾದಂತಹ ಈ ಕೆಲವಂಶಗಳ ಬಗ್ಗೆ ಸಮಾಜವು ಜಾಗೃತವಾಗಿರಬೇಕೆಂದು ಅವರಲ್ಲಿ ಅರಿವುಂಟು ಮಾಡುವರಿದಂತೆ ಒಟ್ಟಾಗಿ, ಸಮಾಜದ. ರಾಷ್ಟ್ರದ ಆರೋಗ್ಯ, ಅಭಿವೃದ್ಧಿ ಪ್ರಗತಿಪರ ಮೌಲ್ಯಗಳ ಬಗ್ಗೆ ನಮ್ಮ ಕಾಳಜಿ ಕೆಲಸ ಮಾಡುತ್ತದೆ, ಆದರೂ ಎಲ್ಲ ಜಾತೀಯ ವರ್ಗದ ಮಹಿಳೆಯರ ಹಿತಾಸಕ್ತಿಯತ್ತಲೂ ನಮ್ಮ ಆದ್ಯತೆ, ಬೇಡಿಕೆಗಳು ನಿರಂತರವಾಗಿ ಕೆಲಸ ಮಾಡುತ್ತಿರುತ್ತವೆ.

ಎಲ್ಲ ಹಂತದಲ್ಲೂ ಮಹಿಳೆಯರು ಪರಿಣಾಮಕಾರಿಯಾಗಿ ರಾಜಕೀಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡಲು ಅನುವಾಗುವ ವ್ಯವಸ್ಥೆಗಾಗಿ ಮತ್ತು ಭಾರತದ ಭವಿಷ್ಯ ನಿರ್ಮಾಣದಲ್ಲಿ ಮಹತ್ತರ ಪಾತ್ರ ನಿರ್ವಹಿಸುವ ಕ್ರಿಯೆಗಾಗಿ ನಾವು ಒತ್ತಾಯ ಮಾಡುತ್ತಿದ್ದೇವೆ. ಆದ್ದರಿಂದ ಮಹಿಳೆಯರ ರಕ್ಷಣೆ ಮತ್ತು ಅಭಿವೃದ್ಧಿ ಇವೆರಡು ವಿಷಯಗಳು ಎಂದಿಗೂ ರಾಷ್ಟ್ರದ ಯೋಜನಾ ನೀತಿಯಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗದಂತೆ ನೋಡಿಕೊಳ್ಳಬೇಕಾಗಿದೆ. ದುಡಿಯುವ ಮಹಿಳೆಯರಿಗೆ ಹೆರಿಗೆ ಸೌಕರ್ಯವನ್ನು ಕಡಿತ ಮಾಡುವ/ಇಲ್ಲದಂತೆ ಮಾಡುವ ಹಕ್ಕು ಸರ್ಕಾರಕ್ಕೆ ಯಾರು ಕೊಟ್ಟರು? ನಾಲ್ಕನೇ ವೇತನ ಆಯೋಗವಾಗಲಿ ರಾಷ್ಟ್ರೀಯ ಜನನಿಯಂತ್ರಣ ನೀತಿಯಾಗಲೀ ಸಂವಿಧಾನಕ್ಕಿಂತಲೂ ಮೇಲಿದೆಯೇ?

ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ. ಅಖಿಲ ಭಾರತ ಜನವಾದಿ ಮಹಿಳಾ ಸಂಘ (AIDWA), ಭಾರತೀಯ ಮಹಿಳೆಯರ ರಾಷ್ಟ್ರೀಯ ಫೆಡರೇಷನ್ (NFIWA), ಮಹಿಳಾ ದಕ್ಷತಾ ಸಮಿತಿ ಮತ್ತು ಇನ್ನೂ ಕೆಲವು ಮಹಿಳಾ ಸಂಘಟನೆಗಳು ಭಾರತ ಸರ್ಕಾರಕ್ಕೆ ಸಲ್ಲಿಸಿದ ಮನವಿ ಇದು,

ಯಲ್ಲದೆ ಶಾಸನಬದ್ಧ ಲೈಸೆನ್ಸ್ ಅಧಿಕಾರಿಯ ಹತೋಟಿಗೆ ಒಳಪಡಬೇಕಾಗುತ್ತದೆ. ಅವಿವಾಹಿತರು ಮಗು ಪಡೆದುಕೊಳ್ಳಬಾರದೆಂಬುದು ಸರ್ಕಾರದ ಉದ್ದೇಶ ಅಲ್ಲ ಎಂದು ಆರೋಗ್ಯ ಸಚಿವರು ಹೇಳಿದ್ದರೂ ಈ ಕಾನೂನು ತೀವ್ರ ಟೀಕೆಗೆ ತುತ್ತಾಗಿದೆ, ಈ ಆಯ್ಕೆಯ ಸೆಕ್ಷನ್ 1315) ಹೇಳುತ್ತದೆ; ವೈದ್ಯಕೀಯ ನೆರವಿನಿಂದ ಯಾವುದೇ ಮಗು ಹುಟ್ಟಿದರೂ ಆದರ ಕಲ್ಯಾಣದ (ಪೋಷಣೆ) ಬಗೆಗೆ ಸ್ಪಷ್ಟ ವಿಶ್ವಾಸ ಮಾಡುವವರೆಗೆ ಯಾವುದೇ ಮಹಿಳೆಗೆ ವೈದ್ಯಕೀಯ ಸೇವೆ ನೀಡಬಾರದು".

ಕಾನೂನಿನ ಈ ಅಂಶವು ಮಾನವ ಹಕ್ಕುಗಳನ್ನು ಕುರಿತ ಯೂರೋಪಿನ ಒಡನಾಡಿಕೆಯನ್ನು ಉಲ್ಲಂಘಿಸಬಹುದು ಎಂದು ನಾಗರೀಕ ಹಕ್ಕುಗಳ ರಾಷ್ಟ್ರೀಯ ಮಂಡಳಿ (ಲಿಖಿಲಿತ) ಭಾವಿಸಿದೆ. ಮಗುವಿನ ಭವಿಷ್ಯವನ್ನು ಇದು ಯೋಚಿಸುತ್ತದೆ, ಆದರೆ ಇದು ಏಕಾಂಗಿ ಮಹಿಳೆಯರಿಗೆ. ಮಗು ಪಡೆದುಕೊಳ್ಳುವುದಕ್ಕೆ, ನಿರ್ಬಂಧ ಹಾಕುತ್ತದೆ. "ಯಾರಿಗೆ ಮಗು ಇರಲಿ, ಯಾರಿಗೆ ಬೇಡ ಎಂಬುದನ್ನು ಸರ್ಕಾರ ನಿರ್ಧರಿಸುವಂತ ಭಯಂಕರ ಸನ್ನಿವೇಶವನ್ನು ಇದು ಸೃಷ್ಟಿಸುತ್ತದೆ. ಜತೆಗೆ ವೈದ್ಯರು ನಿರ್ಧಾರ ಕೈಗೊಳ್ಳುವಂತೆ ಮಾಡುತ್ತದೆ. ಅದೂ ಕೂಡ ಕೆಟ್ಟ ಪ್ರವೃತ್ತಿಯೋ" ಎಂದು ಲಿಬರ್ಟಿ ವಾದಿಸಿದೆ.

ಸಾರಾಂಶವೆಂದರೆ. Infertile ಮಹಿಳೆಯರಲ್ಲಿ ಒಳ್ಳೆಯ ಪೋಷಕ ಅಥವಾ Parenting ಸರ್ಟಿಫಿಕೇಟು ತರಬೇಕು" ಹಾಗೂ ಕೆಲವು ಮಹಿಳೆಯರಿಗೆ ಅಂಥ ವೈದ್ಯಕೀಯ ನೆರವು ಪಡೆಯುವುದರಿಂದ ತಡೆ ಬಂದರೆ ಅದು ಮಾನವ ಹಕ್ಕು ಉಲ್ಲಂಘನೆ ಎಂದು ಲಿಬರ್ಟಿ ಹೇಳಿದೆ.

ಈಗ ಸರ್ಕಾರಕ್ಕೆ ಯಾವುದೇ ರೀತಿಯ ಹತೋಟಿ ಇಲ್ಲ. ಕೃತಕ ಗರ್ಭಾಧಾರಣೆಗೆ ಒಳಗಾಗುವರ ವಿಷಯದಲ್ಲಿ ಅದು ಮಧ್ಯ ಪ್ರವೇಶಿಸುವಂತಿಲ್ಲ, ಪ್ರತಿಯೊಂದು ವೈದ್ಯಕೀಯ ನೆರವು ಕೇಂದ್ರಗಳು ತಮ್ಮದೇ ಮಾರ್ಗಸೂಚಿಗಳನ್ನು ರೂಪಿಸಿಕೊಂಡಿದೆ. ಒಂದು ಕ್ಲಿನಿಕ್‌ನಲ್ಲಿ ಗಂಡ, ಮತ್ತು ಹೆಂಡತಿ ಇಬ್ಬರ ಜತೆ ದೀರ್ಘ ಚರ್ಚೆ ನಡೆಸಿದ ನಂತರ ನಿರ್ಧಾರ ಕೈಗೊಳ್ಳಲಾಗುವುದು. ಇಲ್ಲಿ ಒಂಟಿ ಮಹಿಳೆ ಬಂದರೂ ಅದೇ ನಿಯಮ, ಮತ್ತೊಂದರಲ್ಲಿ ಮನೋ ವಿಜ್ಞಾನಿಗಳ ನೆರವು ಪಡೆದು ತಾಯಿಯಾಗುವ "ಲಕ್ಷಣ"ಗಳಿವೆಯೋ ಎಂದು ಪರಿಶೋಧಿಸಲಾಗುತ್ತದೆ,

ಹಣ ಇದೆ ತಂತ್ರಜ್ಞಾನವಿದೆ. ನಾವೇಕೆ ಮಾತಾ ಪಿತೃಗಳನ್ನ ನಿರ್ಧರಿಸಬೇಕು. ಎಂದು ವೈದ್ಯ ವಿಜ್ಞಾನದಲ್ಲಿ ಕಾನೂನು, ನೀತಿ ಕುರಿತಂತೆ ಪ್ರಾಧ್ಯಾಪಕಿಯಾಗಿರುವ ಶೈಲಾ ಮ್ಯಾಕ್‌ಲೀನ್ ಪ್ರಶ್ನಿಸುತ್ತಾರೆ,

☐ ಆಶಾ

Reg. No. MAG (5) PRC. DECL 036/86-87.

BOOK-POST/PERIODICALS

To.

If undelivered please return to :
Jagruthi Mahila Adhyayana Kendra
26, 1st Main Road, Vyalikaval,
Bangalore-560 003